ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

**ಬೆಳಕು**

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

**ಜ್ಯೋತಿಕಾರ್ಯ**

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

**ಜ್ಯೋತಿಜೀವಿಗಳು**

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

**ಸಪ್ತಋಷಿಗಳು**

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

**ಮಹರ್ಷಿ ಅಮರ**

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

**ಗುರೂಜಿ ಕೃಷ್ಣಾನಂದ**

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

**ಸಪ್ತಋಷಿ ಧ್ಯಾನಯೋಗ**

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

**ಪ್ರಮಾಣಗಳು**

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.


# ತಪೋವಾಣಿ

ಸಂ. 10 ಸಂ. 5 | ಮೇ 2013 | ರೂ.25


## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ
(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಸಾಧಕರೊಬ್ಬರು ಮುಗ್ಧವಾಗಿ ಕೇಳಿದರು, "ನಾನೇನಾದರೂ ತಪ್ಪು ಮಾಡಿದರೆ, ನೀವು ನನ್ನನ್ನು ಕ್ಷಮಿಸುವಿರಾ?" ಅದು ನನ್ನನ್ನು ನನ್ನ ಪಾತ್ರದ ಬಗ್ಗೆ ಸ್ಪಷ್ಟಪಡಿಸಲು ಪ್ರೇರೇಪಿಸಿತು. ನಾನು ಒಬ್ಬ ಆಧ್ಯಾತ್ಮಿಕ ಮಾರ್ಗದರ್ಶಿ. ಒಬ್ಬ ಮಾರ್ಗದರ್ಶಿ ಮಾತ್ರ. ನಾನು ಇತರರನ್ನು ತೀರ್ಮಾನಿಸುವುದಿಲ್ಲ ಮತ್ತು ಸಾಧಕರ ಬಗ್ಗೆ ಯಾವುದೇ ರೀತಿಯ ಅಭಿಪ್ರಾಯ ತಳೆಯದಂತೆ ಎಚ್ಚರವಹಿಸುತ್ತೇನೆ. ನಾನೂ ಒಬ್ಬ ಸಾಧಕ, ಹೆಚ್ಚೆಂದರೆ ಒಬ್ಬ ಹಿರಿಯ ಸಾಧಕ ಎಂದು ಒಪ್ಪಿಕೊಳ್ಳಲು ನನಗೆ ಯಾವುದೇ ಹಿಂಜರಿಕೆ ಇಲ್ಲ. ನಮ್ಮೆಲ್ಲರನ್ನೂ ಋಷಿಗಳು ಮಾರ್ಗದರ್ಶಿಸುತ್ತಿದ್ದಾರೆ. ಯಾರನ್ನೇ ಆಗಲಿ ಒಂದು ಧರ್ಮದೊಂದಿಗೆ ಗುರುತಿಸುವ ಗುರುಗಳ ಮತ್ತು ಸ್ವಾಮಿಗಳ ಈ ನಾಡಿನಲ್ಲಿ, ಯಾರೇ ಆದರೂ ನನ್ನನ್ನು ಒಬ್ಬ ಗುರು ಅಥವಾ ಸ್ವಾಮಿಯಾಗಿ ಭಾವಿಸುವುದು ಸಹಜ. ನಾನು ಒಂದು ಧರ್ಮಕ್ಕಾಗಿ ಕೆಲಸಮಾಡುವವರಲ್ಲಿ ಒಬ್ಬನಲ್ಲ. ನಾನೊಬ್ಬ ಆಧ್ಯಾತ್ಮಿಕ ಮಾರ್ಗದರ್ಶಿ.

ನಮ್ಮ ಮಾರ್ಗವನ್ನು ಮತ್ತು ನಮ್ಮ ಪರಿಶ್ರಮಗಳನ್ನು ಎಷ್ಟು ಸಾಧಕರು ನಿಜವಾಗಿಯೂ ಮೆಚ್ಚುತ್ತಾರೆ ಎಂದು ಕೌತುಕ ಪಡುತ್ತೇನೆ. ಸಾಧಕರು ಗುರುಕುಲ ಅಥವಾ ಆಶ್ರಮಗಳನ್ನು ಸೇರಿಕೊಂಡಾಗ ಮಾತ್ರ ಪ್ರಾರಂಭದಲ್ಲಷ್ಟೇ ಅಲ್ಲದೆ ಅವರ ಸಾಧನವಿಡೀ ವೈಯಕ್ತಿಕ ಮಾರ್ಗದರ್ಶನ ಸಿಗುತ್ತದೆ. ಇಲ್ಲಿ, ಧ್ಯಾನ ಕಲಿಸಿಕೊಡುವುದಷ್ಟೇ ಅಲ್ಲ, ವಿಷಯಗಳು ಮತ್ತು ಅವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನು ಕೂಡ ತಿಳಿಸಲಾಗುತ್ತದೆ; ಸಾಧಕರನ್ನು ಹತ್ತಿರದಿಂದ ಗಮನಿಸಲಾಗುತ್ತದೆ ಮತ್ತು ಅವರಿಗೆ ವೈಯಕ್ತಿಕವಾಗಿ ಮತ್ತು ನಿರಂತರವಾಗಿ ಮಾರ್ಗದರ್ಶನ ನೀಡಲಾಗುತ್ತದೆ. ಸಾಧಕರ ದೈನಂದಿನ ಜೀವನಕ್ಕೆ ಅಡಚಣೆಯಾಗುವುದಿಲ್ಲ, ಅಂದರೆ ಸಾಧಕರ ಜೀವನದ ಗುಣಮಟ್ಟದಲ್ಲಿ ಯಾವುದೇ ಅಡಚಣೆ ಉಂಟಾಗುವುದಿಲ್ಲ. ವಾಸ್ತವಾಂಶವೆಂದರೆ, ಗೊಂದಲ ಮತ್ತು ಉದ್ವೇಗ ಶಮನವಾದಾಗ ಅವರ ಜೀವನದ ಗುಣಮಟ್ಟ ಉತ್ತಮಗೊಳ್ಳುತ್ತದೆ. ಇಂಥ ಸತತ ಮಾರ್ಗದರ್ಶನ ಬೇರೆ ಮಾರ್ಗಗಳಲ್ಲಿ ಸಿಗುವುದಿಲ್ಲ. ಇದನ್ನು ನಮ್ಮ ಸಾಧಕರು ಎಂದಾದರೂ ಗಮನಿಸಿದ್ದಾರೆಯೇ ಎಂದು ಆಶ್ಚರ್ಯಪಡುತ್ತೇನೆ. ಬಹುಶಃ ನಮಗೆ ಯಾವುದೂ ಸುಲಭವಾಗಿ ಸಿಗಬಾರದು!

ಇನ್ನೂ ಅನೇಕ ವಿಶೇಷತೆಗಳಿವೆ. ಆಧ್ಯಾತ್ಮಿಕ ಸಾಧನೆಗೋಸ್ಕರ ನಿಜಜೀವನದಿಂದ ಓಡಿಹೋಗುವ ಅವಶ್ಯಕತೆ ಇಲ್ಲ ಎಂಬುದನ್ನು ಪದೇ ಪದೇ ಒತ್ತಿಹೇಳಲಾಗುತ್ತದೆ. ಸಿದ್ಧಿಗಳ ಹಿಂದೆ ಹೋಗುವುದರಲ್ಲಿರುವ ಅಪಾಯಗಳನ್ನು ಆಗಾಗ್ಗೆ ವಿವರಿಸಲಾಗುತ್ತದೆ ಮತ್ತು ಅಂಥ ಯಾವುದೇ ಕವಲುದಾರಿಗಳಿರದ ಯೋಗದ ಅನ್ವೇಷಣೆಯ ಮಹತ್ವವನ್ನು ಅರ್ಥಮಾಡಿಸಿಕೊಡಲಾಗುತ್ತದೆ. ಇದಕ್ಕೆ ಪೂರಕವಾಗಿರುವ ಯಾವುದೇ ಇತರ ಸಾಧನೆಯನ್ನು ಸಾಧಕ ಕೈಗೆತ್ತಿಕೊಳ್ಳಲು ಅನುಮತಿ ಇದೆ ಮತ್ತು ಆತನನ್ನು ಈ ಮಾರ್ಗದಲ್ಲಷ್ಟೇ ಉಳಿಸಿಕೊಳ್ಳಲು ಯಾವುದೇ ನಿರ್ಬಂಧಗಳನ್ನು ಹೇರುವುದಿಲ್ಲ.

ಈ ಅಂಶಗಳು ಸಾಧಕರ ಮನಸ್ಸಿಗೆ ನಾಟದಿದ್ದರೆ ಮತ್ತು ಅವರು ಒಳ್ಳೆಯತನವನ್ನು ಉಪೇಕ್ಷಿಸಿದರೆ ನನ್ನ ಹೃದಯಕ್ಕೆ ನೋವಾಗುತ್ತದೆ. ಅನಾಸಕ್ತ ವರ್ತನೆ ನೋವುಂಟುಮಾಡುತ್ತದೆ.

ಜನರನ್ನು ಭೇಟಿ ಮಾಡಲು ಮನಸ್ಸಿಲ್ಲದಿರುವ ಬಗ್ಗೆ ನಾನು ಪರ್ಯಾಲೋಚಿಸುತ್ತಿದ್ದೆ. ನನಗೆ ಕೆಲಸದ ಒತ್ತಡವಿದೆ ಮತ್ತು ಬಿಡುವಿನ ಸಮಯವಿಲ್ಲ. ನನ್ನ ಜೀವನದ ಯಾವುದೇ ಘಟ್ಟದಲ್ಲಿ ಜನರೊಡನೆ ಬೆರೆಯುವ ಪ್ರವೃತ್ತಿ ನನ್ನದಾಗಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ, ಸಂದರ್ಶಕರು ಒಂದು ಹೊಸ ತಂತ್ರವನ್ನೋ ಅಥವಾ ನನ್ನ ಗುರುವಿನ ಜೀವನದ ಒಂದು ರೋಮಾಂಚಕ ಘಟನೆಯನ್ನೋ ತಿಳಿದುಕೊಳ್ಳಲು ಕಾತುರರಾಗಿರುತ್ತಾರೆ. ಅವರು ಕೆಲಸದ ಬಗ್ಗೆ ಅಥವಾ ಕಾರ್ಯರೂಪಕ್ಕೆ ತರಲು ನನ್ನ ಗುರುವಿನ ಕಾಲದಿಂದ ಕಾಯುತ್ತಿರುವ ನಮ್ಮ ಆಧ್ಯಾತ್ಮಿಕ ಯೋಜನೆಗಳ ಬಗ್ಗೆ ಮಾತನಾಡುವುದು ಅತಿ ವಿರಳ. ಅವರು ತಮ್ಮ ಸಾಧನೆಯ ಬಗ್ಗೆ ಮಾರ್ಗದರ್ಶನಕ್ಕಾಗಿ ಅರಸಿ ಬರುವುದೂ ವಿರಳ.

ನನ್ನ ಜೀವನ ಮತ್ತು ಅದರ ಎಲ್ಲ ಸಮಯ ಇರುವುದು ಮಾರ್ಗದರ್ಶನಕ್ಕಾಗಿ, ಕೆಲಸಕ್ಕಾಗಿ ಮತ್ತು ಸಾಧನಕ್ಕಾಗಿ ಮಾತ್ರ. ಆದರೆ.... ■


ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಸ್ವರ್ಗಕ್ಕೊಂದು ಪತ್ರ

ಪ್ರೀತಿಯ ಗುರೂಜಿ,

"ಯಾತನೆ ವಿದಾಯಗಳಿಂದ ಅಲ್ಲ. ಅದಾಗುವುದು ಹಿಂಬಾಲಿಸುವ ನೆನಪುಗಳಿಂದ...."

ನನ್ನ ಜೀವನದ ಒಂದು ಘಟ್ಟದಲ್ಲಿ ನನ್ನನ್ನು ಒಂಟಿತನ ಕಾಡುತ್ತಿತ್ತು. ಇದ್ದಕ್ಕಿದ್ದಂತೆ ಜೀವನ ಅರ್ಥವಿಲ್ಲದಂತೆ ಕಂಡಿತು, ನಾನು ಪ್ರತಿಯೊಂದನ್ನೂ ಪ್ರಶ್ನಿಸಲಾರಂಭಿಸಿದೆ. ಜೀವನದ ಕ್ರೌರ್ಯಗಳಿಂದ ಬಿಡುಗಡೆಯೇ ಇಲ್ಲವೆನಿಸಿತ್ತು. ಆ ಸಮಯದಲ್ಲಿ ನೀವು, ಬೀಸುವ ಹೊಸ ತಂಗಾಳಿಯಂತೆ ನನ್ನ ಜೀವನಕ್ಕೆ ಪ್ರವೇಶಿಸಿದಿರಿ, ಮತ್ತು ಮ್ಯಾಜಿಕ್ ರೀತಿಯಲ್ಲಿ ನನ್ನೆಲ್ಲ ಸಮಸ್ಯೆಗಳೂ ಇದ್ದಕ್ಕಿದ್ದಂತೆ ಮಾಯವಾದವು. ನನ್ನ ಕಾಲುಗಳು ಕುಪ್ಪಳಿಸಿದವು, ನನ್ನ ಮುಖ ನಗೆಯಿಂದ ತುಂಬಿತು. ಇದ್ದಕ್ಕಿದ್ದಂತೆ ನನಗೆ ಪುನಃ ಹಕ್ಕಿಗಳ ಚಿಲಿಪಿಲಿ ಕೇಳಿಸತೊಡಗಿತು, ಮುಸ್ಸಂಜೆಯ ಸೊಬಗನ್ನು ನಾನು ಪುನಃ ಆಸ್ವಾದಿಸತೊಡಗಿದೆ. ನನ್ನಂತೆಯೇ ಮಿಲಿಯಾಂತರ ಜನ ನಿಮ್ಮ ಬಗ್ಗೆ ಇದೇ ರೀತಿಯ ಅನುಭವ ಹೊಂದಿದ್ದಾರೆ ಎಂಬುದು ನನಗೆ ಖಚಿತವಾಗಿದೆ. ನೀವು ಮಿಲಿಯಾಂತರ ಜೀವಗಳನ್ನು ಸ್ಪರ್ಶಿಸಿದ್ದೀರಿ ಎಂಬುದು ನಂಬಲಸಾಧ್ಯ ಎನಿಸಿದರೂ ಅದು ನೂರಕ್ಕೆ ನೂರರಷ್ಟು ಸತ್ಯ. ನನಗೆ ನಿಮ್ಮೊಂದಿಗೆ ಯಾವಾಗಲೂ ಹಾಯೆನಿಸುತ್ತಿತ್ತು ಏಕೆಂದರೆ ನೀವು ನನ್ನನ್ನೆಂದೂ ತೀರ್ಮಾನಿಸಲಿಲ್ಲ, ನಾನು ನಿಮ್ಮೊಂದಿಗೆ ನನ್ನ ಘೋರ ರಹಸ್ಯಗಳನ್ನು ಹೇಳಿಕೊಂಡಾಗಲೂ ನೀವು ನನ್ನನ್ನು ಕೀಳಾಗಿ ಕಾಣಲಿಲ್ಲ. ನಿಮ್ಮೊಂದಿಗೆ ಮಾತನಾಡಲು ಅವಕಾಶ ಸಿಕ್ಕಾಗಲೆಲ್ಲ, ನನ್ನ ಸ್ನೇಹಿತನೊಂದಿಗೆ ನನ್ನ ಹೃದಯದಲ್ಲಿರುವುದನ್ನೆಲ್ಲ ಹೊರಹಾಕುತ್ತಿರುವಂತೆ ನನಗನಿಸುತ್ತಿತ್ತು. ನೀವು ಎಂದೆಂದಿಗೂ ನನ್ನ ಆಪ್ತಸ್ನೇಹಿತ.

ಒಬ್ಬ ವ್ಯಕ್ತಿ ನಮ್ಮೊಂದಿಗೆ ಇಲ್ಲವಾದಾಗ ಆತನಿಗೆ ಹೆಚ್ಚು ಮಹತ್ವ ಕೊಡುತ್ತೇವೆ ಎಂಬುದು ಸತ್ಯ. ನೀವು ಮಾಡುತ್ತಿದ್ದ ಪ್ರತಿಯೊಂದು ಕ್ರಿಯೆಯೂ ಒಂದು ಜೀವನ–ಪಾಠದಂತೆ ಇತ್ತು. ಆಪತ್ತಿನ ಸಂದರ್ಭಗಳಲ್ಲೂ ಕೂಡ ನೀವು ನಕ್ಕು, ಇತರರೂ ನಗುವಂತೆ ಮಾಡುತ್ತಿದ್ದಿರಿ. ನೀವು ಎಂದೂ ಆಕ್ಷೇಪಿಸುತ್ತಿರಲಿಲ್ಲ ಮತ್ತು ನೀವು ಕೊನೆಯವರೆಗೂ ಜೀವನದ ಚಿಕ್ಕ ಚಿಕ್ಕ ಸಂತೋಷಗಳನ್ನು ಆನಂದಿಸುತ್ತಿದ್ದಿರಿ – ಅನೇಕ ಜನರು ಉಪೇಕ್ಷಿಸುವ ಒಂದು ಸರಳವಾದ ಹೂದಾನಿಯಲ್ಲಿರುವ ಹೂವುಗಳನ್ನು ಪ್ರಶಂಸಿಸುವುದರಿಂದ ಹಿಡಿದು, ರಾಗಗಳನ್ನು ಗ್ರಹಿಸುವ ಮತ್ತು ಪ್ರಾಮಾಣಿಕವಾಗಿ ಪ್ರಶಂಸಿಸುವುದರವರೆಗೆ, ರಾಜಕೀಯದ ಬಗ್ಗೆ ಮಾತನಾಡುವುದರವರೆಗೆ, ಆಸ್ಪತ್ರೆಯ ಪ್ರತಿಯೊಬ್ಬ ಸಿಬ್ಬಂದಿಯನ್ನು ನಿಮ್ಮ ವಿನಯಪೂರ್ವಕ 'ನಮಸ್ತೆ' ಮತ್ತು ನಿಮ್ಮ ಪ್ರೀತಿಭರಿತ ನಗೆಯೊಂದಿಗೆ ಅಭಿನಂದಿಸುವುದರವರೆಗೆ.

ಪ್ರತಿಸಾರಿ ನಿಮ್ಮ ಮನೆಯ ಮುಂದೆ ಹೋಗುವಾಗ, ನೀವು ಅಲ್ಲಿ ಒಳಗಡೆ ಇದ್ದೀರಿ ಎಂದು ಇನ್ನೂ ನನಗನಿಸುತ್ತಿರುತ್ತದೆ. ನಿಮ್ಮನ್ನು ಬಹಳಷ್ಟು ಮಿಸ್ ಮಾಡುವ ಕ್ಷಣಗಳೂ ಇವೆ ಆದರೆ ನೀವು ನಮಗೆಲ್ಲರಿಗೂ ನಮ್ಮ ಜೀವನದ ಈ ಕಡು ದುಃಖವನ್ನು ನಿಭಾಯಿಸಲು ಅಗಾಧವಾದ ಶಕ್ತಿಯನ್ನು ನೀಡಿದ್ದೀರಿ. ಇಲ್ಲಿ ನಿಮ್ಮ 'ಇರುವಿಕೆ'ಯನ್ನು ಇನ್ನೂ ಬಹಳವಾಗಿ ಅನುಭವಿಸುತ್ತಿದ್ದೇವೆ ಮತ್ತು ನನಗೆ ಗೊತ್ತು, ಅದು ಎಂದಿಗೂ ಅಳಿಯುವುದಿಲ್ಲ.....

ನಿಮ್ಮವಳೇ ಆದ,
ಅಪೂರ್ವ

## ನಿರಂತರ ಮಾರ್ಗದರ್ಶಿ

**ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಸದಾ ನನ್ನ ಮೇಲಿರುವ ಗುರೂಜಿಯವರ ಅಭಯಹಸ್ತ, ಭೌತಿಕ ಮಟ್ಟದಲ್ಲಿ ಅವರೊಂದಿಗೆ ಜೊತೆಗೂಡಿರಲು ಸ್ವಲ್ಪ ಕಾಲವಾದರೂ ಅವಕಾಶ ದೊರಕಿದ್ದು, ಈ ಜೀವಿತಾವಧಿಯಲ್ಲಿ ಸಂಭವಿಸಿದ ಅತ್ಯುತ್ತಮ ಘಟನೆಗಳು. ಇದು ಬದುಕಿನಲ್ಲಿ ಪ್ರೀತಿ, ಗೌರವ ಮತ್ತು ಸಂತೋಷವನ್ನು ತಂದುಕೊಟ್ಟಿತು. ಅವರ ದೈವಿಕ ನೆಲೆಗೆ ಬರುವ ಹಂಬಲ ಇತರ ಯಾವುದೇ ಹಂಬಲಕ್ಕಿಂತ ಬಲವಾಗಿತ್ತು.

ಬೇರೆ ಎಲ್ಲವನ್ನೂ ಮತ್ತು ಎಲ್ಲರನ್ನೂ ಮರೆಯಲು ಕೇವಲ ಅವರೊಂದಿಗೆ ಇರುವುದಷ್ಟೇ ಸಾಕಾಗಿತ್ತು ಏಕೆಂದರೆ ಅವರು ಅಂಥ ಆಕರ್ಷಣೀಯ ಮತ್ತು ಪ್ರಭಾವೀ ವ್ಯಕ್ತಿತ್ವವನ್ನು ಹೊಂದಿದ್ದರು. ಅವರಾಡಿದ ಪ್ರತಿಯೊಂದು ಶಬ್ದ ಜೇನಿನಂತಿರುತ್ತಿತ್ತು, ಅವರ ಮುಗುಳ್ನಗೆ ಎಲ್ಲೆಯಿಲ್ಲದ ಆನಂದದ ನೆಲೆಯಾಗಿರುತ್ತಿತ್ತು.

ಅವರು ಭೌತಿಕ ಮಟ್ಟದಲ್ಲಿ ಲಭ್ಯವಿದ್ದಾಗ, ಯಾವುದೇ ಸಮಸ್ಯೆಗೆ ಆಚರಣೆಗೆ ತರಬಲ್ಲ ಪರಿಹಾರವನ್ನು ನೀಡುತ್ತಿದ್ದರಲ್ಲದೆ, ಜೀವನದ ಏರುಪೇರುಗಳ ಮೂಲಕ ದಾಟಿಹೋಗಲು ಪ್ರೀತಿ ಮತ್ತು ಚೈತನ್ಯಗಳನ್ನು ಸುರಿಸುತ್ತಿದ್ದರು. ಅವರು ಗತಿಸಿದ ನಂತರವೂ ಅವರು ಸೂಕ್ಷ್ಮ ಮಟ್ಟದಿಂದ ನಮ್ಮನ್ನು ಮಾರ್ಗದರ್ಶಿಸುವುದನ್ನು ಮುಂದುವರಿಸಿದ್ದಾರೆ. ಸಮತಲ ಮಟ್ಟದ ಈ ಜೀವನದಿಂದ ಏರಿ ಉನ್ನತ ಮಟ್ಟದಲ್ಲಿನ ಬದುಕನ್ನು ಅಳವಡಿಸಿಕೊಳ್ಳಲು ನಮ್ಮ ಹೋರಾಟವನ್ನು ಮುಂದುವರಿಸುತ್ತಿರುವಾಗಲೇ ಅವರು ನಮ್ಮನ್ನು ಮೇಲೆ ಎತ್ತಿಹಿಡಿಯುತ್ತಾರೆ. ■

## ಗುರೂಜಿ, ನೀವು ಎಲ್ಲಿದ್ದೀರಿ?

ಜಯಾ ಬಿ; ಅನು: ಸುಧಾಕರ್

ಗುರೂಜಿ, ನೀವೆಲ್ಲಿದ್ದೀರಿ? ನಮಗೆ ತಿಳಿದಿದೆ, ಆದರೂ ನಿಮ್ಮ ಭೌತಿಕ ಉಪಸ್ಥಿತಿಗಾಗಿ ನಮ್ಮ ಹೃದಯ ಇನ್ನೂ ಹಂಬಲಿಸುತ್ತಿದೆ. ನೀವು ಮಾನಸ ಕುಟುಂಬದವರೆಲ್ಲರ ಪ್ರತಿ ಉಸಿರಿನಲ್ಲಿರುವುದು ಮಾತ್ರವಲ್ಲದೆ ಈ ಭೂಮಿಯ ಸಮಸ್ತ ಸೃಷ್ಟಿಯಲ್ಲಿ ಹಾಗೂ ಅದರಿಂದಾಚೆಯೂ ಇದ್ದೀರಿ ಎಂದು ನಮಗೆ ತಿಳಿದಿದೆ. ಏಕೆಂದರೆ ನಿಮ್ಮ ಪ್ರೀತಿಯ ವಿಸ್ತಾರ ಅಷ್ಟೊಂದಿದೆ. ಒಟ್ಟಿಗೇ ನೀರು ಕುಡಿದರೆ ನೀರಿಗೆಲ್ಲಿ ನೋವಾಗುತ್ತದೆಯೋ ಎಂದು ನೀವು ಗುಟುಕು ಗುಟುಕಾಗಿ ಕಾಳಜಿಯಿಂದ ಕುಡಿಯುತ್ತಿದ್ದಂತೆ, ಗುಟುಕು ನೀರು ಕುಡಿಯುವಷ್ಟೇ ಸುಲಭವಾಗಿ ವಿಶಾಲ ಆಕಾಶವನ್ನೂ ಅಪ್ಪಿಕೊಂಡಿರಿ.

ನೀವು ಉಪಯೋಗಿಸುತ್ತಿದ್ದ ಪೆನ್ನನ್ನು ಅಪರೂಪವಾಗಿ ಬಳಸಬೇಕೆಂದು ನೀವು ಯೋಚಿಸುತ್ತಿದ್ದಾಗ, ಅದು ತನ್ನ ದುಃಖವನ್ನು ಹೇಳಿಕೊಳ್ಳಲು ಕಾರಣವಾದದ್ದು ನಿಮ್ಮ ಶ್ರದ್ಧೆ, ನಿಮ್ಮ ಕೊನೆಯಿಲ್ಲದ ಪ್ರೀತಿಯಲ್ಲದೆ ಬೇರೇನು! ಮಾರಾಟ ಮಾಡಬೇಕಾಗಿದ್ದ ನಿಮ್ಮ ಕಾರು ತನ್ನ ದುಃಖವನ್ನು ಹೇಳಿಕೊಂಡದ್ದು, ಅದಕ್ಕೆ ಬದಲಾಗಿ ನಿಮ್ಮ ಪ್ರೀತಿಯನ್ನು ಪಡೆದುಕೊಂಡು ಸಾಂತ್ವನ ಪಡೆದದ್ದು ಹೇಗೆ. ಶಿಥಿಲಗೊಂಡಿದ್ದ ಬಾಡಿಗೆ ಕಾರು ಕೂಡಾ, ನೀವು ಅದು ಪ್ರಯಾಣಕ್ಕೆ ಯೋಗ್ಯವಾಗಿದೆಯೆ ಎಂದು ಅನುಮಾನಿಸಿದಾಗ, ಅದು ಯಾಂತ್ರಿಕ ತೊಂದರೆಗೊಳಗಾಗುವುದರ ಮೂಲಕ ತನ್ನ ದುಃಖವನ್ನು ಪ್ರದರ್ಶಿಸಿದ್ದು, ನಂತರ ತಾನು ದುರಸ್ತಿ ಹೊಂದುವುದಕ್ಕಾಗಿ ಇಂತಹುದೇ ವಾಹನವನ್ನು ನಿಲ್ಲಿಸಿರಿ ಎಂದು ನಿಮಗೆ ತಿಳಿಸಿದ್ದು ಹೇಗೆ.

ಗುರೂಜಿ! ನಾವು ತಪ್ಪುಗಳನ್ನು ಮಾಡಿರಬಹುದು, ನಮ್ಮ ಅಜ್ಞಾನದಿಂದ ಕುರುಡಾಗಿರುವ ನಾವು ನಿಮ್ಮ ಸಂಪೂರ್ಣ ಭವ್ಯತೆಯನ್ನು ಅರಿಯದಿರಬಹುದು, ಆದರೂ ನಾವು ನಿಮ್ಮನ್ನು ನಿಜವಾಗಿಯೂ ಪ್ರೀತಿಸುತ್ತೇವೆ. ನೀವು, ಗಾಳಿ ಬೀಸಿದಾಗಿನ ಎಲೆಗಳ ಶಬ್ದದೊಂದಿಗೆ, ಹಕ್ಕಿಗಳ ಪ್ರತಿಯೊಂದು ಚಿಲಿಪಿಲಿ ಶಬ್ದದೊಂದಿಗೆ, ಪ್ರತಿ ಸೂರ್ಯೋದಯ ಹಾಗೂ ಸೂರ್ಯಾಸ್ತದೊಂದಿಗೆ ನಿಮ್ಮ ಇರುವಿಕೆಯನ್ನು ನಮ್ಮ ಅನುಭವಕ್ಕೆ ತಂದು, ನಮ್ಮನ್ನು ಸಮಾಧಾನಗೊಳಿಸುತ್ತೀರಿ. ನೀವು ನಮಗೆ ಕಲಿಸಿಕೊಟ್ಟಿದ್ದೆಲ್ಲವನ್ನೂ ಶ್ರದ್ಧೆಯಿಂದ ಆಚರಣೆಗೆ ತರಬೇಕೆನ್ನುವುದಕ್ಕಾಗಿ ನಿಮ್ಮ ಪುಸ್ತಕಗಳನ್ನು ಮತ್ತೊಮ್ಮೆ ಓದಿದಾಗ, ಸುಪ್ತ ಜ್ವಾಲಾಮುಖಿಯು ಜೀವಂತಗೊಳ್ಳುವ ರೀತಿಯಲ್ಲಿ ಪ್ರತಿಯೊಂದು ಪದವೂ ನಮ್ಮ ಕಿವಿಗಳಲ್ಲಿ ಮಾರ್ದನಿಸುತ್ತದೆ.

ಭಾನುವಾರದ ನಿಮ್ಮ ತರಗತಿಯ DVDಗಳ ಮುಖಾಂತರ ನೀವು ನಮ್ಮೊಡನೆ ಮಾತನಾಡುವುದನ್ನು ಮುಂದುವರಿಸಿದ್ದೀರಿ, ಕಲಿಸುತ್ತಿದ್ದೀರಿ ಮತ್ತು ನಗಿಸುತ್ತಿದ್ದೀರಿ, ನಮ್ಮನ್ನು ಚಿಂತಿಸುವಂತೆ ಮಾಡುತ್ತಿದ್ದೀರಿ; ಇದರಿಂದಾಗಿ ನಾವು ಉಲ್ಲಾಸಗೊಳ್ಳುತ್ತಿದ್ದೇವೆ ಮತ್ತು ನಾವು ಭಾಗ್ಯಶಾಲಿಗಳೆಂದು ಅನಿಸುತ್ತದೆ.

'ನೀವೆಲ್ಲಿದ್ದೀರಿ' ಎಂದು ನಾವು ಮತ್ತೊಮ್ಮೆ ಕೇಳುವುದಿಲ್ಲ, ಏಕೆಂದರೆ ನಮ್ಮೊಳಗಿರುವ ನಿಮ್ಮ ನಿರಂತರ ಸಾನ್ನಿಧ್ಯದೊಂದಿಗೇ ನಾವು ಜೀವಿಸುತ್ತಿದ್ದೇವೆ.

## ಗುರೂಜಿ – ಒಂದು ಯುಗದ ಅಂತ್ಯ

ರಾಮಚಂದ್ರ ಕೆ; ಅನು: ವರ್ಷಾ ದೀಪಕ್

ಇದೊಂದು ಕನಸೇ ಅಥವಾ ವಾಸ್ತವತೆಯೇ?......... ಗುರೂಜಿಯವರು ತಮ್ಮ ಭೌತಿಕ ಶರೀರವನ್ನು ತೊರೆದಿದ್ದಾರೆ ಮತ್ತು ಅವರು ನಮಗೆ ಇನ್ನೆಂದೂ ಲಭ್ಯವಿಲ್ಲ, ಇದು ಭೌತಿಕ ವಾಸ್ತವ. ಭೌತಿಕ ಮಟ್ಟದಲ್ಲಿ ಅವರಿಲ್ಲದಿರುವುದು ಒಂದು ಯುಗದ ಅಂತ್ಯ ಮತ್ತು ಆಶ್ಚರ್ಯಕರವಾಗಿ ಇದು ಒಂದು ಹೊಸ ಯುಗದ ಆರಂಭ ಕೂಡಾ ಆಗಿದೆ. ಏಕೆಂದರೆ ಅವರು ವಿಭಿನ್ನ ಹಂತದಲ್ಲಿ ನಮಗೆಲ್ಲರಿಗೂ ಲಭ್ಯವಿದ್ದಾರೆ. ನಾವು ಇನ್ನೂ ಹೆಚ್ಚು ಜಾಗರೂಕರಾಗಿ, ಹೆಚ್ಚು ಜವಾಬ್ದಾರರಾಗಿ ಮತ್ತು ಇಷ್ಟು ವರ್ಷಗಳಲ್ಲಿ ಅವರು ನಮಗೆ ಹೇಳಿಕೊಟ್ಟಿರುವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಆರಂಭಿಸಬೇಕು ಎಂಬುದರ ಅರಿವನ್ನು ಇದು ಮೂಡಿಸುತ್ತದೆ.

ಅವರು ಒಬ್ಬ ಪರಿಪೂರ್ಣ ಮಾನವರಾಗಿ ಬಾಳಿದರು ಮತ್ತು ಅಜ್ಞಾತ ವಿಶ್ವಗಳನ್ನು ಕಂಡುಕೊಂಡರು. ಅವರು ಎಷ್ಟೊಂದು ಆಧ್ಯಾತ್ಮಿಕ ಜ್ಞಾನ ಮತ್ತು ಚೈತನ್ಯಗಳನ್ನು ಕೆಳತಂದರೆಂದರೆ, ಅದನ್ನು ಅಂತರ್ಗತ ಮಾಡಿಕೊಳ್ಳಲು ಹಾಗೂ ಅರ್ಥೈಸಿಕೊಳ್ಳಲು ನಮಗೆ ಅನೇಕ ಜನ್ಮಗಳು ಬೇಕು. ಅವರನ್ನು ಭೇಟಿಯಾಗುವ ತನಕ ನನಗೆ ಧ್ಯಾನ, ಋಷಿಗಳು, ದೇವರು, ಸೂಕ್ಷ್ಮ ಪ್ರಪಂಚಗಳು, ಪುನರ್ಜನ್ಮ, ಚೈತನ್ಯಗಳು, ಆಧ್ಯಾತ್ಮಿಕ ಜ್ಞಾನ, ಕರ್ಮಗಳು ಮತ್ತು ಇನ್ನೂ ಅನೇಕ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಯಾವುದೇ ಸ್ಪಷ್ಟವಾದ ಜ್ಞಾನ ಇರಲಿಲ್ಲ. ಅನೇಕ ವರ್ಷಗಳ ಅವರೊಂದಿಗಿನ ಒಡನಾಟದಿಂದಾಗಿ, ಅವರು ಹರಿಸಿದ ಜ್ಞಾನದಿಂದಾಗಿ ನಮ್ಮಲ್ಲಿ ಬಹಳಷ್ಟು ಅರಿವುಂಟಾಗಿದೆ. ಜೀವನವೆಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಅನೇಕ ವರ್ಷಗಳೇ ಬೇಕಾಯಿತು. ಅವರು ಜೀವನದ ಎಲ್ಲಾ ಮಟ್ಟಗಳಲ್ಲೂ ಅದರ ಸೌಂದರ್ಯವನ್ನು ಅನುಭವಿಸುತ್ತಾ, ಪ್ರಕೃತಿಯನ್ನು ಆಸ್ವಾದಿಸುತ್ತಾ ಜೀವಿಸುತ್ತಿದ್ದುದನ್ನು ನಾವು ನೋಡಿದ್ದೇವೆ. ಅಂತಿಮವಾಗಿ, ಇಲ್ಲಿನ ಪ್ರತಿಯೊಂದು ಸೃಷ್ಟಿಯೂ ಕೂಡಾ ದೇವರ ಪ್ರೀತಿಯ ಕಾರಣದಿಂದಾಗಿ ಎಂದು ನಾವು ಅರಿಯುವಂತೆ ಮಾಡಿದರು. ನಮ್ಮ ಮೂಲ ಗುಣ ಪ್ರೀತಿ ಎನ್ನುವುದನ್ನು ನಮಗವರು ತಿಳಿಸಿಕೊಟ್ಟಿದ್ದಾರೆ. ನಾವು ನಮ್ಮ ಜೀವನವನ್ನು ಅನಗತ್ಯ ವಿಷಯಗಳಲ್ಲಿ ಕಳೆಯದೆ, ನಮ್ಮ ಜೀವನವನ್ನು ಅಧ್ಯಾತ್ಮೀಕರಿಸುವತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು ಮತ್ತು ಈ ಜೀವನವನ್ನು ಅತ್ಯಂತ ಶಾಂತತೆಯಿಂದ ಜೀವಿಸಬೇಕೆಂದು ಇದರಿಂದ ನಮಗೆ ತಿಳಿಯುತ್ತದೆ. ನಾವು ಜೀವನದಲ್ಲಿ ಇನ್ನೂ ಹೋರಾಡುತ್ತಿರುವಾಗ, ಜೀವನದ ಅಲೆಗಳನ್ನು ಎದುರಿಸಲು ಹಾಗೂ ಹೋರಾಟದ ನಡುವೆಯೂ ನಗಲು ಅವರು ಒಂದು ವಿಶೇಷವಾದ ಧೈರ್ಯ ಮತ್ತು ಶಕ್ತಿಯನ್ನು ನಮ್ಮಲ್ಲಿ ಮತ್ತೆಮತ್ತೆ ತುಂಬಿದ್ದಾರೆ. ಅವರೊಂದಿಗಿನ ಒಡನಾಟದಿಂದಾಗಿ, ನಮ್ಮ ಜೀವನ ಸುಗಮವಾಯಿತು ಮತ್ತು ನಾವು ಯಾವುದರೊಂದಿಗಾದರೂ ಹಾಗೂ ಎಲ್ಲದರೊಂದಿಗೆ ಹೊಂದಾಣಿಕೆಯಿಂದಿರಲು ಸಾಧ್ಯವಾಯಿತು.

ನಮ್ಮಲ್ಲಿ ಇಂಥ ಪರಿವರ್ತನೆಯನ್ನು ತಂದಿದ್ದಾರೆ! ಇದಕ್ಕೆ ಪ್ರತಿಯಾಗಿ ಅವರಿಗೆ ನಾವೇನನ್ನು ಕೊಡಬಹುದು? ಕೇವಲ ಪ್ರೀತಿ ಮತ್ತು ಉತ್ತಮ ಪ್ರಪಂಚದ ಅವರ ಕನಸನ್ನು ಪೂರೈಸುವ ದೃಢಸಂಕಲ್ಪ. ನಾವು ಮತ್ತು ಈ ಭೂಮಿಯು ಪುನಃ ಪುನಃ ಇಂತಹ ಗುರುವಿನಿಂದ ಆಶೀರ್ವದಿಸಲ್ಪಡಲೆಂದು ನಾನು ಪ್ರಾರ್ಥಿಸುತ್ತೇನೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

## ಗುರೂಜಿ ಹೀಗೆ ನುಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

04–05–2003

ನಾವು ತೆಗೆದುಕೊಳ್ಳುವ ಆಹಾರ, ಗಾಳಿಗಳಿಂದ, ಚಕ್ರಗಳನ್ನು ಚೇತನಗೊಳಿಸುವುದರಿಂದ ಮತ್ತು ಉನ್ನತ ಲೋಕಗಳಿಂದ ಚೈತನ್ಯಗಳನ್ನು ಪಡೆಯುತ್ತೇವೆ. ಆಹಾರದಿಂದ ಪಡೆಯುವ ಚೈತನ್ಯ ಮುಖ್ಯವಾಗಿ ಭೌತಿಕ ದೇಹಕ್ಕಾಗಿ, ಅದರ ಒಂದು ಭಾಗ ಉತ್ಕರ್ಷಗೊಂಡು ಮನಸ್ಸಿಗೆ ಉಪಯೋಗವಾಗುತ್ತದೆ. ಈ ಚೈತನ್ಯದ ಒಂದು ಭಾಗ ಇನ್ನೂ ಉತ್ಕರ್ಷಗೊಂಡು ಬುದ್ಧಿಶಕ್ತಿಗೆ ಉಪಯೋಗವಾಗುತ್ತದೆ. ಜೀವಾಧಾರವೆನಿಸಿದ ಪ್ರಾಣವನ್ನು ಸೂರ್ಯನಿಂದ ಪಡೆಯುತ್ತೇವೆ. ಅದು ದೇಹ, ಮನಸ್ಸು ಮತ್ತು ಬುದ್ಧಿಯನ್ನು ಸಚೇತನಗೊಳಿಸಲು ಬಳಕೆಯಾಗುತ್ತದೆ. ನಾವು ಧ್ಯಾನ ಮಾಡಿದಾಗ, ನಮ್ಮ ಕರ್ಮಗಳನ್ನು ದಹಿಸುವಂತಹ, ನಮ್ಮ ಇಡೀ ವ್ಯವಸ್ಥೆಯನ್ನು ಶುಚಿಗೊಳಿಸಿ ನಮ್ಮ ಅಂತರ್–ಗ್ರಹಣಶಕ್ತಿಯನ್ನು ಚುರುಕುಗೊಳಿಸುವಂತಹ, ಚೈತನ್ಯಗಳನ್ನು ಉನ್ನತ ಹಂತಗಳಿಂದ ಪಡೆಯುತ್ತೇವೆ. ಮೂರನೇ ಕಣ್ಣನ್ನು ತೆರೆಯುವುದರಲ್ಲಿ ಕೂಡಾ ಇದು ಸಹಾಯ ಮಾಡುತ್ತದೆ.

---

ಧ್ಯಾನ ಕಾಲದಲ್ಲಿ ಬೆಳಕನ್ನು ಕಾಣುವುದು ಅಥವಾ ಕೆಲವುಸಲ ಗಾಳಿ ಬೀಸುವುದನ್ನು ಕೇಳುವಂತಾಗುವ ಅನುಭವಗಳು ಭೌತಿಕ ಹಂತವನ್ನು ಮೀರಿದ ಸೂಕ್ಷ್ಮ ಹಂತಕ್ಕೆ ಸೇರಿದ್ದು. ಸೂಕ್ಷ್ಮ ಹಂತಕ್ಕೆ ಮೀರಿದ್ದು, ಕಾರಣಿಕ ಹಂತ. ಇಲ್ಲಿ ಮನಸ್ಸು ಇರುವುದಿಲ್ಲ ಮತ್ತು ಆಲೋಚನೆಗಳ ವರ್ಗಾವಣೆಯಿಂದ ಸಂಪರ್ಕ ಸಂಭವಿಸುತ್ತದೆ. ಇಲ್ಲಿ ಉಜ್ವಲ ಬೆಳಕು ಇರುತ್ತದೆ. ಕಾರಣಿಕ ಹಂತವನ್ನು ಮೀರಿದ್ದು ದೈವಿಕ ಹಂತ. ಇಲ್ಲಿ ಆಲೋಚನೆಗಳು ಮತ್ತು ಶಬ್ದಗಳು ಇರುವುದಿಲ್ಲ. ಇಲ್ಲಿ ಸಂಪರ್ಕ ನೇರವಾಗಿ ಒಂದು ಆತ್ಮದಿಂದ ಇನ್ನೊಂದು ಆತ್ಮಕ್ಕೆ ಸಂಭವಿಸುತ್ತದೆ. ಇಲ್ಲಿ ನಾವು ನೋಡಲು ಆಗದ ಊಹಾತೀತವಾದ ಉಜ್ವಲ ಬೆಳಕು ಇರುತ್ತದೆ. ನೋಡುವುದು, ಕೇಳುವುದು, ಇಂತಹ ಅನುಭವಗಳು ಕೆಳಹಂತಕ್ಕೆ ಸೇರುತ್ತವೆ. ದೈವಿಕ ಹಂತದಲ್ಲಿ ನಾವು ಬೆಳಕನ್ನು ಅನುಭವಿಸುತ್ತೇವೆ. ನಾವು ತುರೀಯ ಹಂತವನ್ನು ಪ್ರವೇಶಿಸಿದಾಗ ಇಂತಹ ಬೆಳಕುಗಳ ಅನುಭವಗಳಾಗುತ್ತವೆ.

ಬೆಳಕುಗಳ ಮೂಲಕ ನಾವು ಜ್ಞಾನ, ವಿವೇಕ ಮತ್ತು ಚೈತನ್ಯಗಳನ್ನು ಪಡೆಯುತ್ತೇವೆ. ಅತ್ಯುನ್ನತ ಹಂತವೆನಿಸಿದ ದೈವಿಕ ಹಂತದಲ್ಲಿ ಬೆಳಕನ್ನು ಅನುಭವಿಸಿದಾಗ ನಾವು ಅಕ್ಷರಶಃ ದೈವೀಕರಾಗುತ್ತೇವೆ. ದೇವರು ಹೊಂದಿರುವ ಶಕ್ತಿ, ಜ್ಞಾನ ಮತ್ತು ಎಲ್ಲ ಅತೀತ ಸಾಮರ್ಥ್ಯಗಳನ್ನು ನಾವು ಪಡೆಯುತ್ತೇವೆ. ಈ ಸ್ಥಿತಿಯ ಜನರಲ್ಲಿ ತುಂಬ ವಿವೇಕವಿರುವುದರಿಂದ, ಅವರು ಇವುಗಳನ್ನು ಪ್ರದರ್ಶಿಸುವುದಿಲ್ಲ.

---

ನಮ್ಮ ಮನಸ್ಸು ಮೂರು ಪದರಗಳನ್ನು ಹೊಂದಿದೆ– ಪ್ರಜ್ಞಾ ಪದರ ಅಥವಾ ಜಾಗೃತಾವಸ್ಥೆ, ಅರೆ ಪ್ರಜ್ಞೆಯ ಪದರ ಅಥವಾ ಸ್ವಪ್ನಾವಸ್ಥೆ ಮತ್ತು ಅಪ್ರಜ್ಞಾ ಪದರ ಅಥವಾ ಸುಷುಪ್ತಿ. ಈ ಹಂತದ ಎಲ್ಲ ಅನುಭವಗಳನ್ನು ಮನಸ್ಸಿನ ಮೂಲಕ ಮಾತ್ರ ಪಡೆಯುತ್ತೇವೆ. ಪ್ರಜ್ಞಾಪದರದ ಮೂಲಕ ಭೌತಿಕ ಪ್ರಪಂಚವನ್ನು ನಾವು ಅನುಭವಿಸುತ್ತೇವೆ. ಅರೆಪ್ರಜ್ಞೆಯ ಪದರದಲ್ಲಿ ಕನಸುಗಳು ಮತ್ತು ಕಾಲ್ಪನಿಕವಾದುದನ್ನು ಅನುಭವಿಸುತ್ತೇವೆ. ಅಪ್ರಜ್ಞಾ ಪದರದಲ್ಲಿ ಸೂಕ್ಷ್ಮರೂಪದಿಂದ ಹೊರಬಂದು ಸೂಕ್ಷ್ಮಪ್ರಯಾಣವನ್ನು ಅನುಭವಿಸುತ್ತೇವೆ.

ತುರಿಯಾವಸ್ಥೆ ಒಂದು ಪ್ರಜ್ಞಾತೀತಾವಸ್ಥೆ–ಇದು ಮನಸ್ಸಿಗೆ ಮೀರಿದ ಒಂದು ಆಯಾಮ.

---

ಪ್ರಜ್ಞೆ, ಆತ್ಮದ ಒಂದು ಸಹಜ ಶಕ್ತಿ. ಇದು ಮನಸ್ಸಿನ ವಿವಿಧ ಪದರಗಳಲ್ಲಿ ಬೇರೆಬೇರೆ ರೀತಿ ಕೆಲಸ ಮಾಡುತ್ತದೆ. ಜಾಗೃತಾವಸ್ಥೆಯಲ್ಲಿ ನಮ್ಮ ಪ್ರಜ್ಞೆ ಭೌತಿಕ ಹಂತಕ್ಕೆ ಸೀಮಿತವಾಗಿರುತ್ತದೆ. ಅರೆಪ್ರಜ್ಞೆಯ ಪದರದಲ್ಲಿ ನಮ್ಮ ಪ್ರಜ್ಞೆ ಅದೇ ಪದರಕ್ಕೆ ಸೀಮಿತವಾಗಿರುತ್ತದೆ ಮತ್ತು ಅಪ್ರಜ್ಞೆಯ ಪದರದಲ್ಲಿ ನಮ್ಮ ಪ್ರಜ್ಞೆ ಸೂಕ್ಷ್ಮಹಂತಕ್ಕೆ ಸೀಮಿತವಾಗಿರುತ್ತದೆ. ಈ ಎಲ್ಲ ಪದರಗಳಲ್ಲಿ ಅಥವಾ ಹಂತಗಳಲ್ಲಿ ನಾವು ಸೃಷ್ಟಿಯನ್ನು ಮತ್ತು ಇಡೀ ಸೃಷ್ಟಿಯಲ್ಲಿನ ವೈವಿಧ್ಯತೆ ಅರಿಯುತ್ತೇವೆ. ಆದರೆ ಪ್ರಜ್ಞೆ ತುರೀಯಾವಸ್ಥೆಯನ್ನು ಪ್ರವೇಶಿಸಿದಾಗ ಸೃಷ್ಟಿಯ ಹಿಂದೆ ಇರುವ ಶಕ್ತಿಯನ್ನು ನೋಡುತ್ತೇವೆ, ನಮ್ಮ ಪ್ರಜ್ಞೆ ಮಾಯೆಯನ್ನು ಮೀರಿ ಹೋಗುವುದರಿಂದ ನಾವು ಗೋಡೆಗಳು, ಮರಗಳು, ಕಟ್ಟಡಗಳನ್ನು ನೋಡುವುದಿಲ್ಲ. ನಾವು 'ಜ್ಯೋತಿಸ್ವರೂಪ' ಎನಿಸಿದ ಬೆಳಕನ್ನು ಮಾತ್ರ ನೋಡುತ್ತೇವೆ ಮತ್ತು ದೇವರನ್ನು ಅನುಭವಿಸುತ್ತೇವೆ. ಈ ಪದರ ಮತ್ತು ಮನಸ್ಸನ್ನು ಮೀರಿ ಪ್ರಜ್ಞಾ ಸಾಗರವಿದೆ. ನಮ್ಮ ಪ್ರಜ್ಞೆ ಈ ಪ್ರದೇಶವನ್ನು ಸಮೀಪಿಸಿದ ಕೂಡಲೇ ಅದು ಅನಂತತೆಗೆ ವಿಸ್ತರಿಸುತ್ತಾ ಹೋಗುತ್ತದೆ. ಅದು ವಿಸ್ತಾರವಾಗುವುದು ಮಾತ್ರವಲ್ಲ, ಅನಂತತೆಯನ್ನು, ದೇವರನ್ನು ಕೂಡ ಅನುಭವಿಸುತ್ತದೆ.

ನಮ್ಮ ಗತ ಜೀವನಗಳ ನೆನಪುಗಳು ಮತ್ತು ಎಲ್ಲ ಕರ್ಮಗಳ ದಾಖಲೆಗಳು ನಮ್ಮ ಮನಸ್ಸಿನ ಅಪ್ರಜ್ಞೆಯ ಪದರದಲ್ಲಿ ಸಂಗ್ರಹವಾಗಿರುತ್ತವೆ. ನಮ್ಮ ಹಿಂದಿನ ಮತ್ತು ಮುಂದಿನ ಜೀವನ ತಿಳಿಯಲು ಬಹಳ ಕಷ್ಟ. ಜೀವನದ ಪ್ರವಹನಕ್ಕೆ ಬಾಧಕವಾಗದಿರಲಿ ಎಂದು ಇದನ್ನು ಉದ್ದೇಶ ಪೂರ್ವಕವಾಗಿ ಮುಚ್ಚಿಡಲಾಗಿದೆ. ಆದರೆ ನಮ್ಮ ಆಧ್ಯಾತ್ಮಿಕ ಪ್ರಗತಿಗಾಗಿ ಕೆಲವು ಸಲ ಅಗತ್ಯ ಬಿದ್ದಾಗ ಋಷಿಗಳು ನಮ್ಮ ಗತ ಜೀವನದ ಕೆಲವು ನಿರ್ದಿಷ್ಟ ಘಟನೆಗಳನ್ನು ಹೊರಗೆಡಹುತ್ತಾರೆ.

11–05–2003

ಜಾಗೃತಿ, ಜ್ಞಾನೋದಯ, ಮುಕ್ತಿ ಆಧ್ಯಾತ್ಮಿಕ ಪ್ರಯಾಣದಲ್ಲಿನ ಹಂತಗಳು. ಮೂರ್ತಿಗಳನ್ನು ಮೀರಿ ದೇವರ ಬಗ್ಗೆ ಗಂಭೀರವಾಗಿ ಯೋಚಿಸಲು ಪ್ರಾರಂಭಿಸಿದಾಗ, ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ಮತ್ತು ನಾವು ಯಾರು, ಎಲ್ಲಿಂದ ಈ ಸೃಷ್ಟಿ ಬಂದಿದೆ ಎಂಬುದನ್ನು ಅರಿಯಲು ಪ್ರಾರಂಭಿಸಿದಾಗ ನಾವು ಜಾಗೃತಿಗೊಂಡಿದ್ದೇವೆ ಎನ್ನಬಹುದು. ಜಾಗೃತಿಯಿಂದ ಆಧ್ಯಾತ್ಮ ಪ್ರಯಾಣ ಪ್ರಾರಂಭಿಸುತ್ತದೆ. ಇದಕ್ಕೆ ನಾವು ಸಾವಿರಾರು ಜನ್ಮ ಕಳೆದಿರುತ್ತೇವೆ. ಒಮ್ಮೆ ಜಾಗೃತಿಗೊಂಡರೆ ನಾವು ಪುಸ್ತಕ ಇತ್ಯಾದಿಗಳಿಂದ ಜ್ಞಾನವನ್ನು ಸಂಗ್ರಹಿಸುತ್ತೇವೆ. ನಾವು ಆತ್ಮಗಳು, ಬೆಳಕಿನ ಕಣಗಳು, ಇಂತಹ ವಿಷಯಗಳನ್ನು ಅರಿಯುತ್ತೇವೆ. ಒಬ್ಬ ಮಾರ್ಗದರ್ಶಿ ಅಥವಾ ಸರಿಯಾದ ಗುರುವಿನ ಸಹಾಯದಿಂದ ಬೌದ್ಧಿಕ ನೆಲೆಯಲ್ಲಿ ನಾವು ಜ್ಞಾನವನ್ನು ಮೀರಿ ಹೋಗಬೇಕು. ಆಗ ಮಾತ್ರ ನೇರ ಅನುಭವದಿಂದ, ನಾವು ಬೆಳಕಿನ ಕಣಗಳು ಮತ್ತು ದೇವರು, ಪ್ರಜ್ಞಾಸಾಗರ ಎಂಬುದನ್ನು ಅರಿಯುತ್ತೇವೆ. ಇದು ಜ್ಞಾನೋದಯದ ಸ್ಥಿತಿ. ಇಲ್ಲಿ ಕರ್ಮಗಳೆಲ್ಲ ಕರಗಿ ಹೋಗುತ್ತವೆ ಮತ್ತು ನಾವು ವಾಸ್ತವವಾಗಿ ದೇವರ ಬಳಿಗೆ ಹೋಗುತ್ತೇವೆ, ಅವನೊಂದಿಗೆ ಸೇರಿ ಮುಕ್ತಿ ಪಡೆಯುತ್ತೇವೆ. ಆದರೆ ಜ್ಞಾನೋದಯದ ನಂತರ ನಮ್ಮ ಜೀವಾವಧಿ ಮುಗಿಯುವವರೆಗೂ ಈ ದೇಹವನ್ನು ತ್ಯಜಿಸುವಂತಿಲ್ಲ. ಜ್ಞಾನೋದಯ ಪಡೆದು ದೇವರ ಬಳಿಗೆ ಹಿಂದಿರುಗಿ ಹೋಗಲು ಸಾವಿಗಾಗಿ ಕಾಯುತ್ತಿರುವ ವ್ಯಕ್ತಿಯನ್ನು 'ಜೀವನ್ಮುಕ್ತ' ಎಂದು ಕರೆಯಲಾಗಿದೆ.

---

ಭಗವಾನ್ ಕಲ್ಕಿ 1924ರಲ್ಲಿ ಶಂಬಲದಲ್ಲಿ ಜನಿಸಿದರು. ಶಂಬಲದಲ್ಲಿ ವಾಸಿಸುತ್ತಿರುವ ಪರಶುರಾಮರು ಭಗವಾನ್ ಕಲ್ಕಿಗೆ ವಿದ್ಯಾಭ್ಯಾಸ ಮಾಡಿಸಿದರು. ಭಗವಾನ್ ಕಲ್ಕಿ 1987ರಲ್ಲಿ ಪ್ರಾರಂಭವಾದ ಪ್ರಳಯದ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಪ್ರಳಯ 49 ವರ್ಷಗಳವರೆಗೆ ಇರುತ್ತದೆ.

---

ನಮ್ಮ ಕೆಲಸ ಧ್ಯಾನವನ್ನು ಹೇಳಿಕೊಡುವುದು ಮತ್ತು ಋಷಿಗಳಿಂದ ಪಡೆದ, ವಿಕೃತಗೊಂಡಿಲ್ಲದ ಜ್ಞಾನವನ್ನು ರವಾನೆ ಮಾಡುವುದು. ಹೊಸಯುಗಕ್ಕೆ ಪ್ರವೇಶಿಸಲು ವ್ಯಕ್ತಿಗಳಿಗೆ ತಮ್ಮನ್ನು ಸಿದ್ಧತೆ ಮಾಡಿಕೊಳ್ಳುವುದಕ್ಕೆ ಇದು ಸಹಾಯ ಮಾಡುತ್ತದೆ. ಧ್ಯಾನ ನಮಗೆ ವಿವೇಕ ತರುತ್ತದೆ. ಇದು ಜೀವನದ ಅನೇಕ ಜಟಿಲತೆಗಳನ್ನು ಎದುರಿಸಲು ಮತ್ತು ನಮ್ಮನ್ನು ಬಲಗೊಳಿಸಲು ಸಹಾಯ ಮಾಡುತ್ತದೆ. ಸ್ವಲ್ಪ ಕಾಲದ ನಂತರ ಉನ್ನತ ಸತ್ಯವನ್ನು ಅರಿಯುತ್ತೇವೆ ಮತ್ತು ಅನುಭವಿಸುತ್ತೇವೆ. ಈ ಅರಿವನ್ನು ಇತರರಿಗೆ ರವಾನಿಸಬಲ್ಲವರಾಗುತ್ತೇವೆ. ಇದು ನಮ್ಮ ಮುಖ್ಯ ಕೆಲಸ. ನಾವು ಎಲ್ಲ ಅನುಮಾನಗಳನ್ನು ಪರಿಹರಿಸಲು ಮತ್ತು ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಕೆಲಸ ಮಾಡುತ್ತೇವೆ.

# ಗುರೂಜಿ ಹೀಗೆ ನುಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

ನಮ್ಮ ಕೆಲಸವೆಂದರೆ ಪ್ರೀತಿ, ಶಾಂತಿ ಮತ್ತು ದೈವಿಕತೆಯನ್ನು ಜೀವನದಲ್ಲಿ ಅಭಿವ್ಯಕ್ತಿಸಿ ತೋರಿಸುವುದಾಗಿದೆ. ನಮ್ಮೊಳಗೆ ಶಂಬಲ ಸ್ಥಾಪಿಸಿದ ಮೇಲೆ ಈ ಜಾಗದಲ್ಲಿ ಶಂಬಲವನ್ನು ನಿರ್ಮಿಸುವುದು ಸುಲಭವಾಗುತ್ತದೆ.

25–05–2003

ಸಂಕಷ್ಟ ಸಮಯಗಳಲ್ಲಿ ಜನರು ನನ್ನ ಧ್ವನಿ ಕೇಳಿಸಿತೆಂದು, ಕೆಲವರು ಸಹಾಯ ಕೇಳಿದಾಗ ನನ್ನ ಆಕೃತಿ ಕಂಡಿತೆಂದು ಹೇಳುತ್ತಾರೆ. ಈ ಸಂದೇಶಗಳು ಅಪ್ರಜ್ಞೆಯ ಹಂತದಲ್ಲಿ ನನಗೆ ತಲುಪುತ್ತವೆ. ಆ ಹಂತದಿಂದ ನಾನು ಚೈತನ್ಯಗಳನ್ನು ಆ ವ್ಯಕ್ತಿಗೆ ನನಗರಿವಿಲ್ಲದೆಯೇ ತಲುಪಿಸುತ್ತೇನೆ. ಆ ಚೈತನ್ಯಗಳು ಬುದ್ಧಿಶಕ್ತಿ ಹೊಂದಿರುತ್ತವೆ. ಅವು ವ್ಯಕ್ತಿಯನ್ನು ಧ್ವನಿಯ ಮುಖಾಂತರ ಅಥವಾ ಆಕೃತಿಯ ಮುಖಾಂತರ ತಲುಪಬೇಕೆಂಬುದನ್ನು ನಿರ್ಧರಿಸುತ್ತವೆ. ಆಗ ಜನರಿಗೆ ಇಂತಹ ಅನುಭವವಾಗುತ್ತದೆ ಮತ್ತು ಸಮಸ್ಯೆಗಳಿಗೆ ಪರಿಹಾರ ಪಡೆಯುತ್ತಾರೆ. ನನಗೆ ಈ ಹಂತದಲ್ಲಿ ಇವುಗಳ ಅರಿವಾಗದಿದ್ದರೂ, ನಾನು ಆ ಹಂತಕ್ಕೆ ಹೋಗಿ ಅವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

ನೀವು ನನ್ನನ್ನು ಭೇಟಿ ಮಾಡಿದಾಗ ನೀವು ಕೇಳದಿದ್ದರೂ ಕೂಡಾ ನಾನು ಚೈತನ್ಯಗಳನ್ನು ರವಾನಿಸುತ್ತೇನೆ. ಈ ಚೈತನ್ಯಗಳು ಬಹಳ ಕಾಲದವರೆಗೆ, ನೀವು ಧ್ಯಾನವನ್ನು ನಿಲ್ಲಿಸುವವರೆಗೆ ಅಥವಾ ಈ ಮಾರ್ಗವನ್ನು ಬಿಡುವವರೆಗೂ ನಿಮ್ಮೊಡನೆ ಇರುತ್ತವೆ. ಪ್ರತಿಸಲವೂ ನೀವು ಒಂದು ಧ್ವನಿಯನ್ನು ಕೇಳದಿರಬಹುದು ಅಥವಾ ಒಂದು ಆಕಾರವನ್ನು ನೋಡದಿರಬಹುದು, ಆದರೆ ಚೈತನ್ಯಗಳು ತಮ್ಮಷ್ಟಕ್ಕೆ ಕೆಲಸ ಮಾಡುತ್ತವೆ. ಎಷ್ಟೋ ಬಾರಿ ನೀವು ಕೇಳದಿದ್ದರೂ ನಿಮಗೆ ಸಹಾಯ ಮಾಡುತ್ತವೆ ಮತ್ತು ಮಾರ್ಗದರ್ಶಿಸುತ್ತವೆ. ಆದ್ದರಿಂದಲೇ ಜನರೊಂದಿಗೆ ಧ್ಯಾನಗಳಿಂದ ಮನೋಸಂಪರ್ಕ ಮಾಡುವುದು ಒಂದು ಅದ್ಭುತ ಅನುಭವ.

ನಾನು ನನ್ನ ದೇಹ ತೊರೆದ ಮೇಲೆ ತಪೋನಗರದಲ್ಲಿ ನನ್ನ ಚೈತನ್ಯಗಳನ್ನು ಬಿಟ್ಟುಹೋಗುತ್ತೇನೆ. ಇವು ಅನೇಕ ಪೀಳಿಗೆಗಳವರೆಗೂ ಇರುತ್ತವೆ. ಜನರು ಅವುಗಳಿಂದ ಯಾವಾಗಬೇಕಾದರೂ ಪ್ರಯೋಜನ, ಮಾರ್ಗದರ್ಶನ, ಸಹಾಯ ಮತ್ತು ರಕ್ಷಣೆ ಪಡೆಯಬಹುದು. ನನ್ನ ಗುರು ಇಲ್ಲಿಲ್ಲ, ಆದರೆ ಅವರ ಸಮಾಧಿಯ ಕೊಠಡಿಯಲ್ಲಿ ಅವರ ಚೈತನ್ಯಗಳಿವೆ. ನೀವು ಅಲ್ಲಿಗೆ ಹೋಗಿ, ಸಹಾಯ ಕೇಳಿದರೆ ಅವು ಸಹಾಯ ಮಾಡುತ್ತವೆ. ನನ್ನ ಗುರುವಿನ ಧ್ವನಿ ಕೇಳಿದೆವೆಂದು, ಅವರ ಆಕೃತಿಯನ್ನು ನೋಡಿದೆವೆಂದು ಜನರು ನನಗೆ ಹೇಳುತ್ತಾರೆ. ಖಚಿತವಾಗಿ ಅವರಿಗೆ ಸಹಾಯ ಸಿಗುತ್ತದೆ.

ಎಲ್ಲ ದೇವಸ್ಥಾನಗಳಲ್ಲಿ, ಎಲ್ಲ ಪವಿತ್ರ ಸ್ಥಳಗಳಲ್ಲಿ ಕೆಲಸ ಮಾಡುವುದು ಚೈತನ್ಯಗಳೇ. ಶಿವನು ಕೈಲಾಸ ಪರ್ವತದಲ್ಲಿ ಸಾವಿರಾರು ವರ್ಷಗಳ ಹಿಂದೆ, ದೀರ್ಘಕಾಲ ವಾಸಮಾಡಿದ ನಂತರ ತನ್ನ ಚೈತನ್ಯಗಳನ್ನು ಬಿಟ್ಟು ಹೋಗಿದ್ದಾನೆ. ಅಲ್ಲಿಗೆ ಹೋದವರು ಶಿವನನ್ನು ಅನುಭವಿಸುತ್ತಾರೆ.

1988ರಿಂದ ನಾನು ಅನೇಕ ಸಂದರ್ಭಗಳಲ್ಲಿ ಜನರು ತಮ್ಮ ಶರೀರದಲ್ಲಿ ಕೆಲವು ಅಡಚಣೆಗಳನ್ನು ಅನುಭವಿಸಿರುವುದನ್ನು, ದುಷ್ಟ ಶಕ್ತಿಗಳು, ದುಷ್ಟ ಜನರು ಅಥವಾ ದೆವ್ವ–ಭೂತಗಳಿಂದ ಪೀಡಿತರಾದವರನ್ನು ನೋಡಿದ್ದೇನೆ. ಇವುಗಳನ್ನು ಸಾಮಾನ್ಯೀಕರಿಸಿ ಹೇಳುವುದು ಕಷ್ಟ, ಆದರೆ ಇವುಗಳಲ್ಲಿ ಕೆಲವು ನಿಜವಾಗಿಯೂ ಪ್ರಾಮಾಣಿಕವಾದವುಗಳಾಗಿವೆ. ಅನೇಕರ ವಿಷಯಗಳಲ್ಲಿ ಇವೆಲ್ಲ ವ್ಯಕ್ತಿಗಳ ಮಾನಸಿಕ ಭ್ರಾಂತಿಯಾಗಿವೆ. ಮನಸ್ಸು ಒಂದು ಅತ್ಯಂತ ಶಕ್ತಿಯುತ ಸಾಧನ. ಅದು ಕೆಲವು ಸಲ ನಮಗೆ ಸಹಾಯ ಮಾಡುತ್ತದೆ, ಆದರೆ ಕೆಲವು ಸಲ ಒಂದು ರೀತಿಯ ನಕಾರಾತ್ಮಕ ಭ್ರಮೆಯದಾಗಿದ್ದು, ನಮಗೆ ಸಹಾಯ ಮಾಡುವುದಿಲ್ಲ.

ದೇಹ, ಮನಸ್ಸು ಮತ್ತು ಬುದ್ಧಿಗಳ ಸಂಗ್ರಹಿತ ಬುದ್ಧಿಶಕ್ತಿಯೇ ಅಹಂ. ಆತ್ಮ, ಮನಸ್ಸನ್ನು ಮಾತ್ರವಲ್ಲ ಇಡೀ ಅಹಂಅನ್ನು ಮಣಿಸಬಹುದು. ಆತ್ಮ ಅದನ್ನು ಮಣಿಸಲು ನಾವು ಅನುಮತಿಸಬೇಕು. ಇದು ಬಹಳ ಸುಲಭವೆನಿಸಿದರೂ, ಆಚರಣೆಯಲ್ಲಿ ತರಲು ತುಂಬ ಕಷ್ಟ. ಧ್ಯಾನ ಮಾಡುವುದರಿಂದ, ಪ್ರೀತಿಯನ್ನು ಹರಡುವ ಮತ್ತು ಅದನ್ನು ಅಭಿವ್ಯಕ್ತಿಸುವ ಶಂಬಲದ ನಿಯಮವನ್ನು ಅಭ್ಯಸಿಸುವುದರಿಂದ ನಾವು ಆತ್ಮಕ್ಕೆ ಶರೀರ ವ್ಯವಸ್ಥೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅನುಮತಿಸುತ್ತೇವೆ. ಇದರಿಂದಾಗಿ ನಾವು ಜೀವನವನ್ನು ಶಾಂತಿಯುತವಾಗಿ ನಿರ್ವಹಿಸಲು ಸಹಾಯವಾಗುತ್ತದೆ.

01–06–2003

ನಾನು ಇಲ್ಲಿನ ಕೆಲಸವನ್ನು ಪುನರ್–ವ್ಯವಸ್ಥೆಗೊಳಿಸಲು ಮತ್ತು ಗುಂಪುಗಳನ್ನು ರಚಿಸಲು ಪ್ರಯತ್ನಿಸುತ್ತಿದ್ದೇನೆ. ಇದರ ಉದ್ದೇಶ ಜನರು ಕೆಲಸದ ಬಗ್ಗೆ ಪರಿಚಿತರಾಗುವುದಕ್ಕೆ ಸಹಾಯ ಮಾಡುವುದಾಗಿದೆ – ಭೌತಿಕ ಕೆಲಸವಲ್ಲ, ಆದರೆ ಸೂಕ್ಷ್ಮ ಮಟ್ಟದಲ್ಲಿನ ಅನೇಕ ಕೆಲಸಗಳು. ಇದು ಭವಿಷ್ಯದ ಕೆಲಸ. ಈ "ಕೆಲಸ"ವನ್ನು ಕೈಗೊಳ್ಳಲು ನಮ್ಮನ್ನು ಬಹಳಷ್ಟು ಸಿದ್ಧಪಡಿಸಿಕೊಳ್ಳಬೇಕು– ಎಷ್ಟೇ ಪ್ರೀತಿ ಇದ್ದರೂ, ಇತರರೊಂದಿಗೆ ಎಷ್ಟೇ ಹೊಂದಿಕೊಳ್ಳುತ್ತಿದ್ದರೂ ಮತ್ತು ಎಷ್ಟೇ ಪ್ರೀತಿಯನ್ನು ಅಭಿವ್ಯಕ್ತಿಸುತ್ತಿದ್ದರೂ ಸಾಲದು, ಏಕೆಂದರೆ ಈ ಕೆಲಸ ಅಂತಹುದು. ನಾವು ಇಡೀ ಪ್ರಪಂಚದ ಬಗ್ಗೆ, ಈ ಇಡೀ ವಿಶ್ವದ ಬಗ್ಗೆ ಚಿಂತಿಸಬೇಕು.

ನಾವು "ಕೆಲಸ" ಕೈಗೆತ್ತಿಕೊಂಡ ಮೇಲೆ ಅದರ ವಿವರಗಳನ್ನು ತಿಳಿದುಕೊಳ್ಳುವುದರಲ್ಲಿಯೇ ಉಳಿದುಬಿಡುತ್ತೇವೆ. ಅದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಜನರು ನನ್ನೊಂದಿಗೆ ಕುಳಿತು, ನನ್ನೊಡನೆ ಚಿಂತಿಸಬೇಕು ಮತ್ತು ನನ್ನೊಂದಿಗಿರಬೇಕು. ನನ್ನಲ್ಲಿರುವ ವಿವೇಕವನ್ನು ರವಾನಿಸುವುದು ಅಷ್ಟು ಸುಲಭವಲ್ಲ. ಅವರು ನನ್ನ ಹಾಗೆ ಯೋಚಿಸಬೇಕು ಮತ್ತು ಕಾರ್ಯಪ್ರವೃತ್ತರಾಗಬೇಕು. ಕೆಲಸವನ್ನು ಕೈಗೆತ್ತಿಕೊಳ್ಳಲು ನಾವು ಏರ್ಪಾಟು ಮಾಡಿಕೊಳ್ಳಬೇಕು. ಇದನ್ನು ಮಾಡಲು ಪ್ರಾರಂಭಿಸೋಣ.

ಒಬ್ಬ ಪತ್ರಕರ್ತರು "ಈ ಶತಮಾನದ ಏಕೈಕ ದುರಂತ ಯಾವುದು?" ಎಂದು ನನ್ನನ್ನು ಕೇಳಿದರು. ಆಗ ನಾನು ಅಮರರ ಸಂಪರ್ಕದಲ್ಲಿದ್ದೆ. ಅವರು, "ಋಷಿಗಳಿಂದ ನಾವು ಸಂಪರ್ಕ ಕಳೆದುಕೊಂಡಿರುವುದೇ ಈ ಶತಮಾನದ ದುರಂತ" ಎಂದು ಹೇಳಿದರು. ನಾವು ನಿಶ್ಚಯವಾಗಿ ಋಷಿಗಳೊಂದಿಗೆ ಸಂಪರ್ಕವನ್ನು ಪುನಃ ಸ್ಥಾಪಿಸಬೇಕು. ಇದು ಕಷ್ಟವಲ್ಲ. ಇದಕ್ಕೆ ನಾವು ಮಗುವಿನಂತೆ ಮುಗ್ಧರಾಗಬೇಕು. ನಾವು ಋಷಿಗಳ ಒಂದೋ ಎರಡೋ ಸೂಚನೆಗಳನ್ನು ಮಾತ್ರ ಅನುಸರಿಸುತ್ತೇವೆ. ಹೇಗಾದರೂ ಮಾಡಿ ನಾವು ಇದಕ್ಕೆ ಮುಂದಾಗಬೇಕು. ನಾವು ಋಷಿಗಳೊಡನೆ ಸಂಪರ್ಕ ಸ್ಥಾಪಿಸಿದರೆ ಸಮಸ್ತ ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಳ್ಳುವ ಉತ್ತಮ ಅವಕಾಶವನ್ನು ಪಡೆಯುತ್ತೇವೆ. ಕಳೆದು ಹೋಗಿರುವ ಜ್ಞಾನ ಮತ್ತು ಹೊಸ ಜ್ಞಾನವನ್ನು ಪಡೆಯುತ್ತೇವೆ. ಹೊಸ ಜ್ಞಾನವು ಕೆಳಗೆ ಬರಲು ನಮಗಾಗಿ ಸಿದ್ಧವಾಗಿ ಕಾಯುತ್ತಿದೆ. ಮಾನವರಾದ ನಾವು ಇನ್ನೂ ಅದಕ್ಕೆ ಸಿದ್ಧರಾಗಿಲ್ಲ. ನಮಗಿರುವ ಅಲ್ಪ ಜ್ಞಾನ ಅಥವಾ ಅರೆಜ್ಞಾನದಿಂದ ಈ ಪ್ರಪಂಚದ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ನಾವು ಪ್ರಯತ್ನಿಸುತ್ತೇವೆ. ನಾವು ಬೆಳೆದಾಗ ಮತ್ತು ಪ್ರಬುದ್ಧರಾದಾಗ ಈ ಜ್ಞಾನವನ್ನು ಪಡೆಯಲು ನಾವು ಅರ್ಹರಾಗುತ್ತೇವೆ.

ವ್ಯಕ್ತಿಗಳ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದು ಮುಖ್ಯವಲ್ಲ. ವೈಯಕ್ತಿಕವಾಗಿ ಮುಕ್ತಿ ಹೊಂದುವುದಕ್ಕಾಗಿ ನಾವು ಇಲ್ಲಿಲ್ಲ. ನಾವು ಇಲ್ಲಿರುವುದು ಇತರರಿಗೆ ಸಹಾಯ ಮಾಡುವುದಕ್ಕಷ್ಟೇ ಅಲ್ಲ, ಆದರೆ ಅವರ ಸೇವೆ ಮಾಡುವುದಕ್ಕಾಗಿ. ಇದು ಮೊದಲ ಆದ್ಯತೆ. ನಾವು ಋಷಿಗಳ ಕೆಲಸವನ್ನು ಕೈಗೆತ್ತಿಕೊಂಡ ಮೇಲೆ ಸೇವಾಭಾವವನ್ನು ಮನಸ್ಸಿನಲ್ಲಿಡುವುದು ಮುಖ್ಯ. ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ■

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಎರಡನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)
ಪ್ರಕಾಶ್‌ಮಾರ್ಗ್ (ಮರಾಠಿ)
ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-
ಡಿಡಿಯನ್ನು
**'Manasa Light Age Foundation'**
ಹೆಸರಿನಲ್ಲಿ ಕಳುಹಿಸಬೇಕು.
ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಆನೇಕಲ್ ಕೇಂದ್ರದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಕಟ್ಟಡದಲ್ಲಿ, ಗುರೂಜಿಯವರ ಪವಿತ್ರ ಚಿತಾಭಸ್ಮವನ್ನು ಏಪ್ರಿಲ್ 15ರಂದು ಸ್ಥಾಪಿಸಲಾಯಿತು

## ಸುದ್ದಿ – ಸೂಚನೆಗಳು

- 19-5-2013 ರಂದು ತಪೋನಗರದಲ್ಲಿ ನಡೆಯುವ ಗುರೂಜಿಯವರ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 16-5-2013 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.
- ಅಂದಿನ ಕಾರ್ಯಕ್ರಮದಲ್ಲಿ – "Guruji Speaks (Vol-7)" ಮತ್ತು "Channelled Knowledge from the Rishis (Vol-4)" ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು.
- ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ 5ನೇ ವಾರ್ಷಿಕೋತ್ಸವವನ್ನು 15-4-2013 ರಂದು ಆಚರಿಸಲಾಯಿತು. ಅಂದು ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡದಲ್ಲಿ, ಗುರೂಜಿಯವರ ಪವಿತ್ರ ಚಿತಾಭಸ್ಮ ಸ್ಥಾಪನೆ ಮತ್ತು ಆ ಕಟ್ಟಡದ ಚೈತನ್ಯೀಕರಣ ಕಾರ್ಯಕ್ರಮದಲ್ಲಿ 80 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ನಮ್ಮ ಸಾಧಕರಿಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ದಿನಾಂಕ 8-5-2013, ಬುಧವಾರದಂದು ಬೆಳಿಗ್ಗೆ 11ಕ್ಕೆ ಆಯೋಜಿಸಲಾಗಿದೆ. ದೂರಕಲಿಕೆಯ ಸಾಧಕರು ಕೂಡಾ ವೆಬ್‌ಕಾಸ್ಟ್ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತರು ದಿನಾಂಕ 5-5-2013 ರ ಮೊದಲು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ. ವಿವರಣೆಗಾಗಿ ದಯವಿಟ್ಟು ನಮ್ಮ ಮಾನಸ ಆಫೀಸನ್ನು ಸಂಪರ್ಕಿಸಿ.

## ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮ

**ಭಾನುವಾರ 19-5-2013**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ ಭಾಷಣ |
| | ಭಾಷಣಗಳು |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಶುಕ್ರ | ಕೃಷ್ಣ ಅಷ್ಟಮಿ |
| 08 | ಬುಧ | ಮಾಸ ಶಿವರಾತ್ರಿ |
| 09 | ಗುರು | ಅಮಾವಾಸ್ಯೆ |
| 11 | ಶನಿ | ಸೂರ್ಯಗ್ರಹಣ: ಬೆಳಿಗ್ಗೆ 2.55 – 8.55 |
| 13 | ಸೋಮ | ಅಕ್ಷಯ ತೃತೀಯ |
| 18 | ಶನಿ | ಗುರೂಜಿಯವರ ಹುಟ್ಟುಹಬ್ಬ ಲೈಟ್ ಚಾನಲ್ಸ್ ವಿಶ್ವ ಸಂಚಲನ – 5ನೇ ವಾರ್ಷಿಕೋತ್ಸವ ಶುಕ್ಲ ಅಷ್ಟಮಿ |
| 19 | ಭಾನು | ಗುರೂಜಿಯವರ ಹುಟ್ಟುಹಬ್ಬ ಆಚರಣೆ |
| 20 | ಸೋಮ | ಶುಕ್ಲ ದಶಮಿ |
| 25 | ಶನಿ | ಬುದ್ಧಪೂರ್ಣಿಮಾ ಚಂದ್ರಗ್ರಹಣ: ಬೆಳಿಗ್ಗೆ 9.23 – 9.56 |

18-5-2013ರಂದು ಬೆಳಿಗ್ಗೆ 11.30 ಘಂಟೆಗೆ ಆನೇಕಲ್‌ನ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶಂಬಲ ಅಥವಾ 'ರಾ' ತರಗತಿಯಲ್ಲಿ ತಮ್ಮ ಸ್ಥಳಗಳಿಂದಲೇ ಭಾಗವಹಿಸಿದವರು, ತಮ್ಮ ಹಾಜರಾತಿಯನ್ನು ಮಾನಸ ಆಫೀಸಿಗೆ ಫೋನ್ ಅಥವಾ ಇ-ಮೇಲ್ ಮೂಲಕ ತಪ್ಪದೇ ತಿಳಿಸಿ.

## ಲೈಟ್ ಚಾನಲಿಂಗ್ ಅನುಭವಗಳು

ಲೈಟ್ ಚಾನಲಿಂಗ್ ತಂತ್ರ ಕಲಿಸಿಕೊಟ್ಟಂದಿನಿಂದ, ನನ್ನಲ್ಲಿ ಮಹತ್ತರವಾದ ಬದಲಾವಣೆಗಳು ಕಾಣಲಾರಂಭಿಸಿದವು. ನಾನು ಸಂತೋಷ, ಶಾಂತತೆ, ಸಕಾರಾತ್ಮಕತೆ ಮತ್ತು ಇನ್ನೂ ಹೆಚ್ಚಿನದನ್ನು ಅನುಭವಿಸಿದೆ. ಈ ಸೆಷನ್‌ಗೆ ಮೊದಲು ನನ್ನ ಭಾವನೆಗಳು ಮತ್ತು ಆಲೋಚನೆಗಳು ಬಹಳ ನಕಾರಾತ್ಮಕವಾಗಿದ್ದವು. ನನಗೆ ನನ್ನ ಶಾಲಾಭ್ಯಾಸಗಳಲ್ಲಿ ಸಂಪೂರ್ಣವಾಗಿ ಗಮನಕೊಡಲು ಸಾಧ್ಯವಾಗುತ್ತಿರಲಿಲ್ಲ ಮತ್ತು ನಾನು ಭರವಸೆ ಕಳೆದುಕೊಂಡಿದ್ದೆ. ಆದರೆ ಈ ಸೆಷನ್‌ನಲ್ಲಿ ಭಾಗವಹಿಸಿದ ನಂತರ ನನ್ನ ಸ್ವಭಾವದಲ್ಲಿ ಬದಲಾವಣೆ ಉಂಟಾಯಿತು. ನನ್ನ ಆಲೋಚನೆಗಳು ಸಕಾರಾತ್ಮಕಗೊಂಡವು ಮತ್ತು ನನ್ನಲ್ಲಿ ಪುನಃ ಭರವಸೆ ಮೂಡಲಾರಂಭಿಸಿತು. ಕಿರುಪರೀಕ್ಷೆಗಳ ಸಮಯದಲ್ಲಿ, ಪ್ರತಿದಿನ ನಾನು ಅಭ್ಯಾಸಕ್ಕೆ ಮೊದಲು 7 ನಿಮಿಷಗಳ ಕಾಲ ಈ ತಂತ್ರವನ್ನು ಅಭ್ಯಸಿಸಿದೆ ಮತ್ತು ನನಗೆ ಉತ್ತಮ ಅಂಕಗಳು ದೊರಕಿತು.

– ನಾಗಾರ್ಜುನ ರಾಮ್‌ಬಾಬು ವಟ್ಟಿ, 8ನೇ ತರಗತಿ,
ವಿಶ್ವಕರ್ಮ ವಿದ್ಯಾಲಯ ಇಂಗ್ಲೀಷ್ ಸೆಕೆಂಡರಿ ಶಾಲೆ, ಪುಣೆ

ಮುಂಚೆ, ನನಗೆ ನನ್ನ ಅಮ್ಮನಿಂದ ಸಣ್ಣಪುಟ್ಟ ವಿಷಯಗಳಿಗಾಗಿ ಬೈಗುಳಗಳು ಸಿಗುತ್ತಿದ್ದವು. ಈಗ ನಾನು ಆಕೆಗೆ ಬೆಳಕನ್ನು ಕಳುಹಿಸುತ್ತೇನೆ ಮತ್ತು ಆಕೆ ನನ್ನನ್ನು ಬೈಯುತ್ತಿಲ್ಲ. ಲೈಟ್ ಚಾನಲಿಂಗ್ ನನ್ನ ಏಕಾಗ್ರತಾ ಶಕ್ತಿಯನ್ನು ಉತ್ತಮಗೊಳಿಸಿದೆ ಮತ್ತು ನನಗೆ ಹೆಚ್ಚು ಸಕಾರಾತ್ಮಕ ಆಲೋಚನೆಗಳು ಬರುತ್ತವೆ. ಈ ಹಿಂದೆ, ಮೊದಲ ಬಾರಿ ಓದಿದಾಗ ನನಗೆ ಅರ್ಥವಾಗುತ್ತಿರಲಿಲ್ಲ. ಆದರೆ ಈಗ ನನಗೆ ಅದು ಸಾಧ್ಯವಾಗಿದೆ.

– ಈ. ಮೀನಾಕ್ಷಿ, 12ನೇ ತರಗತಿ, ಎಸ್.ಬಿ.ಎಸ್. ಮೂತಾ ಗರ್ಲ್ಸ್ ಸೀನಿಯರ್ ಸೆಕೆಂಡರಿ ಶಾಲೆ,
ಪೂರ್ವ ಮಂಬಾಲಮ್, ಚೆನ್ನೈ

ನನ್ನ ಗಮನವಿಟ್ಟು ಕೇಳುವ ಅವಧಿ ಹೆಚ್ಚಿದೆ ಮತ್ತು ಬೇಸರ ಪಡದೇ ಅಥವಾ ಏಕಾಗ್ರತೆ ಭಂಗಗೊಳಿಸದೆ ಒಂದೇ ವಿಷಯದಲ್ಲಿ ಹೆಚ್ಚು ಸಮಯ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗಿದೆ. ಸ್ವಲ್ಪಮಟ್ಟಿಗೆ ನನ್ನ ಕೋಪವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಹೆಚ್ಚಿದೆ.

– ಆರ್. ಜೇಯಾ, 12ನೇ ತರಗತಿ, ಎಸ್.ಬಿ.ಎಸ್. ಮೂತಾ ಗರ್ಲ್ಸ್ ಸೀನಿಯರ್ ಸೆಕೆಂಡರಿ ಶಾಲೆ,
ಪೂರ್ವ ಮಂಬಾಲಮ್, ಚೆನ್ನೈ

ನಾನು ಲೈಟ್ ಚಾನಲಿಂಗ್ ಆರಂಭಿಸಿದಾಗ, ನನ್ನ ಸುತ್ತಲಿನ ಇಡೀ ಪ್ರಪಂಚ ಬೆಳಕಾದುದನ್ನು ಕಂಡೆ. ಸುತ್ತಮುತ್ತಲೂ ಶಾಂತಿ ತುಂಬಿತ್ತು. ನನಗೆ ಬೆಳಕಿನ ಹೊರತಾಗಿ ಬೇರೇನೂ ಕಾಣಿಸಲಿಲ್ಲ. ಇದೊಂದು ಉತ್ತಮ ಅನುಭವ.

– ಈ. ಮೀನಾಕ್ಷಿ, 12ನೇ ತರಗತಿ, ಎಸ್.ಬಿ.ಎಸ್. ಮೂತಾ ಗರ್ಲ್ಸ್ ಸೀನಿಯರ್ ಸೆಕೆಂಡರಿ ಶಾಲೆ,
ಪೂರ್ವ ಮಂಬಾಲಮ್, ಚೆನ್ನೈ

ಒಮ್ಮೆ ನನಗೆ ನನ್ನ ತಂದೆಯವರ ಜೊತೆಗೆ ಭಿನ್ನಾಭಿಪ್ರಾಯವುಂಟಾಯಿತು. ಅವರು ನನ್ನ ಮೇಲೆ ಕೂಗಾಡಿ, ತಮ್ಮ ಕೊಠಡಿಯೊಳಗೆ ಹೋದರು. ಇದರಿಂದ ನಾನು ಅತ್ಯಂತ ಕ್ಷೋಭೆಗೊಳಗಾದೆ, ಆಗ ನಾನು ಲೈಟ್ ಚಾನಲಿಂಗ್ ತಂತ್ರವನ್ನು ಅಭ್ಯಾಸ ಮಾಡಿದೆ. 15 ನಿಮಿಷಗಳ ನಂತರ ಅವರು ಹೊರಬಂದರು ಮತ್ತು ನಾನು ಅವರಲ್ಲಿ ಕ್ಷಮೆಯಾಚಿಸಿದೆ. ಅವರು ಕೂಡಾ ನನ್ನನ್ನು ಬೈದುದಕ್ಕೆ ಬೇಸರಪಟ್ಟರು.

– ಎಸ್. ನಿತ್ಯಶ್ರೀ 12ನೇ ತರಗತಿ, ಎಸ್.ಬಿ.ಎಸ್. ಮೂತಾ ಗರ್ಲ್ಸ್ ಸೀನಿಯರ್ ಸೆಕೆಂಡರಿ ಶಾಲೆ,
ಪೂರ್ವ ಮಂಬಾಲಮ್, ಚೆನ್ನೈ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ**

ಗುರೂಜಿಯವರ ತಪೋನಗರ ಅವರನ್ನು ತನ್ನಲ್ಲಿ ತುಂಬಿಸಿಕೊಂಡು ಒಂದು ಪ್ರಭಾವೀ ದೈವೀ ಅಸ್ತಿತ್ವವಾಗಿ ಮೈದಾಳಿದೆ

ವಿಶ್ವ ಚೇತನ ಮಂದಿರದ ಘನ–ಗಾಂಭೀರ್ಯದ ಎತ್ತರದ ನಿಲುವಿನಲ್ಲಿ,
ಕುಂಡಲಿನಿ ಧ್ಯಾನ ಮಂದಿರದ ಅಂತರಾಳದಲ್ಲಿ

ತಪೋವನದ ಪ್ರಶಾಂತತೆಯಲ್ಲಿ, ಸಪ್ತಋಷಿಗಳ ಮಂಡಲಿಯೊಂದಿಗೆ ಅಂತರ್–ಮಾನಸದ ಒಳಕೊಠಡಿಗಳಲ್ಲಿ,
ಅದರ ಸ್ವಸ್ತಿಕದಲ್ಲಿ ಜೀವಶಕ್ತಿಯಾಗಿ

ತಪೋನಗರಿಗರ ಏಕತೆಯಲ್ಲಿ, ಹೊಂದಾಣಿಕೆಯೆಡೆಗಿನ ಅವರ ಬದ್ಧತೆಯಲ್ಲಿ ಮತ್ತು ಪ್ರೀತಿಯ ಅಭಿವ್ಯಕ್ತಿಯಲ್ಲಿ

ಅವರ ನಗುವಿನ ಹಿಂದಿನ ಆನಂದವಾಗಿ, ಅವರ ಕಣ್ಣೀರಿನ ಹಂಬಲಿಕೆಯಾಗಿ, ಬೆಳಕಿನ ಯುಗಕ್ಕಾಗಿ
ಮಾಡುವ ಅವರ ಪ್ರಾರ್ಥನೆಯಲ್ಲಿನ ನಂಬಿಕೆಯಾಗಿ

ಆಟದ ಮೈದಾನದಲ್ಲಿನ ಮಕ್ಕಳ ನಗುವಿನಲ್ಲಿ ಮತ್ತು ವಿನೋದದಲ್ಲಿ,
ತರಗತಿಗಳಲ್ಲಿ ಅವರು ಪಡೆಯುವ ಜ್ಞಾನದಲ್ಲಿ

ಗುರೂಜಿಯವರ ಕನಸಾದ ತಪೋನಗರ ಅವರಿಂದ ಸಾಕಾರಗೊಂಡಿತು ಮತ್ತು ಅವರಿಂದ ವಿಕಾಸಗೊಂಡಿತು

ಗುರೂಜಿಯವರು ಇಲ್ಲಿರುವ ಎಲ್ಲವನ್ನೂ ವ್ಯಾಪಿಸಿದ್ದಾರೆ ಮತ್ತು ತಪೋನಗರವಾಗಿ ಅಭಿವ್ಯಕ್ತಗೊಂಡಿದ್ದಾರೆ.

ಗುರೂಜಿಯವರು ತಪೋನಗರದ ಜೀವಶಕ್ತಿಯಾಗಿದ್ದಾರೆ.

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.


ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ.ರಾವ್; ಅನು: ಸುಧಾಕರ್

ಈಗ ನಡೆಯುತ್ತಿರುವ ಅನ್ಯಾಯದ ಕೆಲಸಗಳ ವಿರುದ್ಧ ಜನರು ಕೋಪ ವ್ಯಕ್ತಪಡಿಸುತ್ತಿದ್ದಾರೆ. ಇದು ಕಡು ಪ್ರಳಯದ ಅವಧಿ. ಇದು ಮಂಥನದ ಸಮಯ. ಗುರೂಜಿಯವರು ಹೇಳುತ್ತಿದ್ದರು – ಯಾವುದೊಂದರ ಜನನವಾಗುವಾಗ ಯಾವಾಗಲೂ ನೋವು ಇರುತ್ತದೆ. ಈಗಿನ ನೋವಿನ ಘಟ್ಟ ಒಂದು ಸುಂದರವಾದ ಘಟ್ಟವಾದ ಹೊಸಯುಗಕ್ಕೆ ನಮ್ಮನ್ನು ಕರೆದೊಯ್ಯುತ್ತದೆ.

ಅದ್ಭುತ ಸಂಗತಿಗಳೂ ಜರುಗುತ್ತಿವೆ. ಸೋಮಾಲಿಯಾದಲ್ಲಿ ಶಾಂತಿ ಹಿಂದಿರುಗಿದೆ. ಹೆಚ್.ಐ.ವಿ.ಗೆ ಮದ್ದು ಕಂಡುಹಿಡಿದಿದ್ದಾರೆ. ಎಲ್ಲಕಡೆ ಒಂದು ರೀತಿಯ ಆಧ್ಯಾತ್ಮಿಕ ಜಾಗೃತಿ ಉಂಟಾಗಿದೆ. ಸಕಾರಾತ್ಮಕತೆ ಮತ್ತು ದೃಢೀಕರಣಗಳನ್ನೊಳಗೊಂಡ ಸ್ವ-ಸಹಾಯ ಪುಸ್ತಕಗಳು ಅಪಾರ ಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಿವೆ. ರಷ್ಯ ದೇಶದವರೊಬ್ಬರು ಬೆಳಕಿನ ಸಹಾಯದಿಂದ ಅಂಗಗಳ ಪುನರುತ್ಪತ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ.

ನಾನು ಒಂದು ಪುಸ್ತಕದಲ್ಲಿ ಅತಿ ಸುಂದರವಾದ ವಿಷಯವೊಂದನ್ನು ಓದಿದೆ. ಅದು ಹೇಳುತ್ತದೆ ಒತ್ತಡದ ಲಕ್ಷಣವನ್ನು ತರುವುದು ಜೀವನದ ಘಟನೆಗಳಲ್ಲ, ಅವುಗಳ ಬಗೆಗಿನ ನಮ್ಮ ಪ್ರತಿಕ್ರಿಯೆ. ಇದರರ್ಥ, ಜೀವನದ ಘಟನೆಗಳು ಒತ್ತಡ ಉಂಟುಮಾಡುವುದಿಲ್ಲ ಆದರೆ ಆ ಘಟನೆಗಳು ಒಳ್ಳೆಯವು ಅಥವಾ ಕೆಟ್ಟವು ಎಂದು ನಾವು ನಿರ್ಣಯಿಸುವುದರಿಂದಾಗಿ ಒತ್ತಡ ಉಂಟಾಗುತ್ತದೆ.

ಕೆಲವೊಮ್ಮೆ ಸಮಸ್ಯೆಗಳು ಜಟಿಲವಾಗಿದ್ದಾಗ, ನಾವು ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ ಬೆಳಕನ್ನು ಕಳಿಸುವುದು, ಬೆಳಕನ್ನು ಪ್ರಾರ್ಥಿಸುವುದು ಮತ್ತು ಆ ವ್ಯಕ್ತಿಗೆ ಸಹಾಯ ಮಾಡಬೇಕೆನ್ನುವ ಬಲವಾದ ಇಂಗಿತವನ್ನು ಹೊಂದಿರುವುದು. ಬೆಳಕು ಖಂಡಿತವಾಗಿಯೂ ಸಹಾಯ ಮಾಡುತ್ತದೆ.

ಸಮಸ್ಯೆಯ ಹಿಂದಿರುವ ಪಾಠವನ್ನು ನಾವು ಅರ್ಥ ಮಾಡಿಕೊಳ್ಳಲಾಗದಂಥ ಸ್ಥಿತಿಯಲ್ಲಿದ್ದ ಸಮಯಗಳಲ್ಲಿ ಋಷಿಗಳು ನಮಗೆ ಸಹಾಯ ಮಾಡುತ್ತಾರೆ.

ನೋವು ಉಂಟಾಗುವುದನ್ನು ತಪ್ಪಿಸಲಾಗುವುದಿಲ್ಲ. ಅಂಥ ಸಮಯಗಳಲ್ಲಿ ನಮ್ಮ ಉನ್ನತ ಗುರಿಯೊಂದಿಗೆ ಶ್ರುತಿಗೂಡಬೇಕು. ಆಗ ಮೇಲ್ಪಟ್ಟಕ್ಕೆ ಸ್ಥಳಾಂತರಗೊಳ್ಳುತ್ತೇವೆ; ನೋವು ಕೆಳ ಮಟ್ಟದಲ್ಲಿಯೇ ಉಳಿದು ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ. ಧ್ಯಾನದಲ್ಲಾಗುವ ವಿಸ್ತಾರಗೊಂಡ ಅರಿವಿನ ಅನುಭವ ನೋವನ್ನು ನಿಭಾಯಿಸಲು ಸಹಾಯ ಮಾಡುತ್ತದೆ. ಧ್ಯಾನಗಳಿಂದ ಮತ್ತು ಸಕಾರಾತ್ಮಕತೆಯಿಂದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿಕೊಳ್ಳಬಹುದು.

'ನಮ್ಮಲ್ಲಿ ನಕಾರಾತ್ಮಕತೆಗಳಿದ್ದರೂ ನಾವು ಬೆಳಕನ್ನು ಅನುಭವಿಸಬಹುದೆ ಅಥವಾ ಬೆಳಕನ್ನು ನಮ್ಮಲ್ಲಿಟ್ಟುಕೊಳ್ಳಬಹುದೇ?' ಎಂಬ ಪ್ರಶ್ನೆಯನ್ನು ನಿವಾಸಿಗಳ ಕೂಟದಲ್ಲಿ ಕೇಳಲಾಯಿತು. ನಮ್ಮಲ್ಲಿ ನಕಾರಾತ್ಮಕತೆ ಇರುವಾಗ ನಾವು ಬೆಳಕನ್ನು ಅನುಭವಿಸಲು ಸಾಧ್ಯವಿಲ್ಲ ಎಂದು ಗುರೂಜಿಯವರು ಹೇಳುತ್ತಿದ್ದುದನ್ನು ನಾವು ಕೇಳಿದ್ದೇವೆ. ಪ್ರಶ್ನೆಯ ಮತ್ತೊಂದು ಭಾಗ 'ನಮ್ಮಲ್ಲಿ ಬೆಳಕನ್ನು ಅನುಭವಿಸುವ ಉತ್ಕಟ ಬಯಕೆ ಇದ್ದರೆ, ನಕಾರಾತ್ಮಕತೆ ಇದ್ದರೂ ಕೂಡ ನಾವು ಬೆಳಕನ್ನು ಅನುಭವಿಸಲು ಸಾಧ್ಯವೇ?' ಉತ್ಕಟತೆ ಅತೀವವಾಗಿದ್ದರೆ, ಪ್ರೀತಿ ಗಾಢವಾಗಿದ್ದರೆ ನಾವು ಬೆಳಕನ್ನು ತಕ್ಷಣವೇ ಅನುಭವಿಸಲು ಮತ್ತು ಎಲ್ಲ ನಕಾರಾತ್ಮಕತೆಯನ್ನು ತೊಡೆದುಹಾಕಲು ಸಾಧ್ಯವಾಗಬಹುದು. ಆದರೆ ನಾವು ಆ ಮಟ್ಟವನ್ನು ತಲುಪಬೇಕು. ಅಲ್ಲಿಯವರೆಗೆ ನಾವು ಧ್ಯಾನ ಮಾಡಬೇಕು, ಸಕಾರಾತ್ಮಕರಾಗಬೇಕು ಮತ್ತು ಪ್ರೀತಿಯನ್ನು ಅಭಿವ್ಯಕ್ತಿಸಬೇಕು; ಬೆಳೆಯುತ್ತ ಹೋಗಿ, ಅಂತಿಮವಾಗಿ ಸಂಪೂರ್ಣವಾಗಿ ಶರಣಾಗುವುದಕ್ಕೆ ಸಿದ್ಧರಾಗುವ ಘಟ್ಟವನ್ನು ನಾವು ತಲುಪಬೇಕು.

ಸಾಧನದ ಬಗ್ಗೆ ಬಹಳಷ್ಟನ್ನು ಬುದ್ಧಿಯ ಮಟ್ಟದಲ್ಲಿ ನಾವು ಅರ್ಥ ಮಾಡಿಕೊಂಡಿದ್ದೇವೆ, ಆದರೆ ಅವುಗಳಲ್ಲಿ ಅನೇಕ ಅಂಶಗಳನ್ನು ಆಚರಣೆಗೆ ತರಲು ನಮಗೆ ಸಾಧ್ಯವಾಗುತ್ತಿಲ್ಲ; ಬಹುಶಃ ನಾವು ಆತ್ಮದ ಮಟ್ಟದಲ್ಲಿ ಅರ್ಥ ಮಾಡಿಕೊಂಡಿಲ್ಲದಿರಬಹುದು. ನಾವು ನಮ್ಮ ಆಧ್ಯಾತ್ಮಿಕ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿದರೆ ಖಂಡಿತವಾಗಿಯೂ ನಾವು ಆ ದಿಕ್ಕಿನಲ್ಲಿ ಹೆಜ್ಜೆಯಿಡುತ್ತೇವೆ. ನಮ್ಮ ಗುರಿಯನ್ನು ನಾವು ನಿರ್ಧರಿಸಬೇಕು ಮತ್ತು ಅದಕ್ಕೆ ಬದ್ಧರಾಗಿರಬೇಕು.

ನಮ್ಮ ಶಾರೀರಿಕ ವ್ಯವಸ್ಥೆಯ ಎಲ್ಲ ಪ್ರಕ್ರಿಯೆಗಳೂ ಆತ್ಮದಿಂದ ಹುಟ್ಟುತ್ತವೆ; ಆದ್ದರಿಂದ ಇದು ಒಂದು ರೀತಿಯಲ್ಲಿ ನಮ್ಮ ಆಧ್ಯಾತ್ಮಿಕ ಸ್ಥಿತಿಯ ಅಳತೆಗೋಲಾಗುತ್ತದೆ. ಧ್ಯಾನದಲ್ಲಿ ನಾವು ದೇವರೊಂದಿಗೆ ಸಂಪರ್ಕಗೊಳ್ಳುತ್ತೇವೆ; ಅವನಿಂದ ಬೆಳಕು ಮತ್ತು ಚೈತನ್ಯಗಳನ್ನು ಪಡೆದುಕೊಳ್ಳುತ್ತೇವೆ, ಇದು ಆತ್ಮದ ಆಧ್ಯಾತ್ಮಿಕ ಸ್ಥಿತಿಯನ್ನು ಉನ್ನತ ಮಟ್ಟಕ್ಕೇರಿಸುತ್ತದೆ. ಧ್ಯಾನಗಳು ನಮ್ಮ ಕರ್ಮಗಳನ್ನು ನಿವಾರಿಸುವುದಷ್ಟೇ ಅಲ್ಲದೆ ನಾವು ಹೊಸ ಕರ್ಮಗಳನ್ನು ಪಡೆಯದಿರುವಂತೆ ನಮ್ಮನ್ನು ಸಿದ್ಧಗೊಳಿಸುತ್ತವೆ. ಧ್ಯಾನಗಳಲ್ಲಿ ಮತ್ತು ಸಕಾರಾತ್ಮಕತೆಗಳಲ್ಲಿ ಅಪಾರವಾದ ಶಕ್ತಿಯಿದೆ.

ಒಂದೇ ಮಾರ್ಗದಲ್ಲಿದ್ದು ಸಾಧನೆಯನ್ನು ಮುಂದುವರಿಸುವುದು ಯಾವಾಗಲೂ ಸಹಾಯ ಮಾಡುತ್ತದೆ. ಎರಡು ಮಾರ್ಗಗಳನ್ನು ಅನುಸರಿಸಿದರೆ, ನೀವು ಯಾವ ಮಾರ್ಗವನ್ನೂ ನಂಬುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಮಾರ್ಗ ನಮ್ಮನ್ನು ವಿಫಲಗೊಳಿಸುವುದಿಲ್ಲ ಆದರೆ ನಾವು ಎರಡೂ ಮಾರ್ಗಗಳನ್ನು ಮತ್ತು ಇಬ್ಬರು ಗುರುಗಳನ್ನೂ ವಿಫಲಗೊಳಿಸುತ್ತೇವೆ. ಹೇಗೇ ಆದರೂ ಅದು ಒಂದು ವೈಯಕ್ತಿಕ ಆಯ್ಕೆ. ■

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ|| ಮೋದಿ ಮುಖ್ಯ ರಸ್ತೆ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ